ಧ್ಯಾನಾವಸಾನಸಮಯೆ....!

ಮಲ್ಲಿಕಾ

ಲಕ್ಷ್ಮೀ ಪ್ರಕಾಶನ
7, ಲ್ಯಾಂಗ್ ಫೋರ್ಡ್ ರೋಡ್,
ಬೆಂಗಳೂರು-25.

ಪ್ರಥಮ ಮುದ್ರಣ–೧೯೬೦
ದ್ವಿತೀಯ ಮುದ್ರಣ–೧೯೬೩

ಬೆಲೆ : ನಾಲ್ಕು ರೂಪಾಯಿ

ಮುದ್ರಕರು
ಶ್ರೀ ಶಾರದಾ ಮುದ್ರಣಾಲಯ,
ಶಂಕರಮಠ, ಬೆಂಗಳೂರು–೪

"ಶ್ರೀ ಅಂಬಿಕಾಪಾದಾರ್ಪಣಮಸ್ತು"

ಧ್ಯಾನಾವಸಾನಸಮಯೆ....!

ಮಲ್ಲಿಕಾ

ಲಕ್ಷ್ಮೀ ಪ್ರಕಾಶನ
7, ಲ್ಯಾಂಗ್ ಫೋರ್ಡ್ ರೋಡ್,
ಬೆಂಗಳೂರು-25.

ಈ ಪುಸ್ತಕವನ್ನು ಕುರಿತು :—

“ ಈ ಸಂಗ್ರಹದಲ್ಲಿರುವ ಕವಿತೆಗಳು ರಸಭಾವ ಪೂರ್ಣವಾಗಿಯೂ ಪರಿಣಾಮಕಾರಿಯಾಗಿಯೂ ಇವೆ. ನಿಮ್ಮ ಕವಿತಾಶಕ್ತಿಯು ಮೃದುಮಧುರ ಶಬ್ದಗಳಿಂದ ಕೂಡಿದ್ದು, ಓದುಗರಿಗೆ ಆನಂದಬಾಷ್ಪಗಳನ್ನು ತರಿಸುವಂತಿವೆ. ಶ್ರೀ ಭುವನೇಶ್ವರಿಯು ತಮ್ಮನ್ನು ಅನುಗ್ರಹಿಸಲಿ. ”

ಪದ್ಮಶ್ರೀ ಬಿ. ಶಿವಮೂರ್ತಿಶಾಸ್ತ್ರಿ.

ಪರಿವಿಡಿ

ಧ್ಯಾನಾವಸಾನಸಮಯೆ....!

ಪೂರ್ವದಿಶಾ ಭಿತ್ತಿಯಲ್ಲಿ ಸ್ವರ್ಣರೇಖಾ
ಛವಿಯ ಚೆಲ್ಲಿ ಉದಯರವಿಯ ಉಜ್ವಲ ಉತ್ಥಾನ !
ಬಾಲಕೋಮಲ ಕಿರಣಗಳೈತರೆ ಬಾಣತಂತ್ರ
ಜಾಲದೋಲೆ, ಎಳೆಎಳೆಯಾಗಿ ಮಿಂಚಿಮಾಯೆ !
ತುಹಿನ ಬಿಂದು ಸಮಾವೃತ ಹಚ್ಚ ಬನಸಿರಿ
ಅರುಣ ಕಿರಣದಿಂದೆ ವಜ್ರಖಚಿತಮಾಗಿ
ಗಿರಿಶೃಂಗ ವೈಮರೆಯೆ ಸೌಂದರ್ಯ ಮಹಾಪೂರ
ಜ್ವಲಿಸಿತು ಧರಾತಲದಿ ಕಿಡಿಕಿಡಿಕಿಡಿಯಾಗಿ.
ಶತಸಹಸ್ರ ವರ್ಣಮಾಲೆ ಶಿಶಿರಸಿಕ್ತ ರೂಪರಾಶಿ
ಫುಲ್ಲ ಕುಸುಮ ರಮ್ಯವೇಶಿ ಸ್ತೂಪಸ್ತೂಪವೇರಿ.
ಹಿಮಮುಕುಟಧರ ಗಿರಿರಾಜ ಮಾರ್ತಾಂಡ
ವರ ತರುನಿಕರ ಮನೋಭವ ಪಚ್ಚರಾಗ,
ವನ ಮೃಗ ಕ್ರೀಡಾಲೋಡಿತ ಶುಭ್ರಮನೋಹರ
ವನವಾರಿಧಿ ಅದ್ಭುತ ಲೀಲಾ ತರಂಗರಂಗ !

ಮಂದಾಕಿನೀ ಫೇನಪುಂಜದಲಿ ಅರುಣರಾಗ
ಚೆಲ್ಲಿ, ವರಪ್ರಸನ್ನ ಮಹೋದಯದಲದ್ದಿ ಉಷೆ !
ಗಿರಿ ಚರಣದರಣ್ಯ ನವ ಚೈತ್ರ ಚೇತನ ತುಂಬಿ
ಶೋಭಾಸಂಪತ್ತಿಯ ಪವಿತ್ರ ಚಿರಂತನಾಶ್ರಯ !
ಹ್ರದ ಸೀಕರಸಿಕ್ತ ವೀಚಿವಾಯು ಎಲೆಎಲೆಯಲಿ,
ಪಲ್ಲವಿತ ಸುಮ ದಳದಳದಲಿ ಸುಳಿಸುಳಿದಾಡಿ,
ನಲಿನಲಿದಾಡಿ, ಮುದ್ದಾಡಿ ಕೇಳೀ ಕಲಹದಲಿ
ಅಸ್ತವ್ಯಸ್ತವಾಗಿ ಬೀಸಿ ಬಿರುಗಾಳಿಯೋಲ್ !
ಸುರಗಿ, ಸಂಪಿಗೆ, ಕೇತಕಿ, ನೀಲ ನೀಲಾಂಬರ,
ಸರೋಜ, ಪಾದರಿ, ಮಲ್ಲಿಕಾ ಪುಷ್ಪವಾಟಿಯ
ಅತುಲ ಕಂಪಿನಾಗರದಲಿ ಸಿಲುಕಿ ವಿರಹಿಯೊಲು
ಅಲೆದಲೆದು ಪಡೆದನಾರಣ್ಯದಿ ಸುಗಂಧಂ.

ಓವೊ, ನೋಡಲ್ಲಿ !
ಪರ್ವತಶ್ರೇಣಿಯ ಚಿದ್‌ಕಾರ್ಗಲ್ಲ ರಾಶಿಯಲಿ
ಭಗವತೀ ಮಂದಾಕಿನಿಯ ರಜತವಾರಿಧಾರೆ ;
ಹಸುರು ಕಪ್ಪು ಒಡಲ ಸೀರೆಗೆ ಬೆಳ್ಳಿಝರಿಯ
ಮೆರುಗನೆ ಹೋಲಿ, ಹರ ಜಟಾಜೂಟ ವಿಹಾರಿಣೀ !
ಪಾರ್ವತಿ ಕರ್ಣಪಲ್ಲವಾಂದೋಳನಗೊಳಿಪ
ಜುಳು ಜುಳು ಜುಳು ಮಧುರವಾದೀ ಜಲಗಾನಂ.

ರುದ್ರಾಕ್ಷದ ಪುಷ್ಪರೇಣು
ಚೆಲ್ಲಿ ಹರಡಿರೆ ಚಾಪೆ ಬಿಚ್ಚಿ ಹರಡಿದವೋಲ್ !
ಕಪಿಂಜಲ ಪಕ್ಷಿಗಳಿಂಡು ಪಿಂಗಲವರ್ಣವ
ತಳೆದಿವೆ ನವ ಚಂಪಕ ಪಿಂಜರ ಪರಾಗದಿಂದೆ.
ಲಾವ-ತಿತ್ತಿರಿ ಟಿಟ್ಟಿಭ-ಕಲವಿಂಕ-ಕಪೋತ
ಪಕ್ಷಿದಂಪತಿಗಳು ಮುಳುಗಿವೆ ಕೇಳೀ ಕಲಹದಿ
ವಿಗಲಿತ ಹಣ್ಣೆಲೆ-ದರುಗೆಲೆ, ಶುಕ-ಶಾರಿಕೆಗಳು
ಕುಕ್ಕಿರ್ಪ ಹಣ್ಣಿನ ಸಿಪ್ಪೆ, ಬೀಜಂಗಳ್ ಚೆಲ್ಲಿ
ಹರಡಿ ಚಿತ್ರಮಯವಾಗಿತ್ತಾ ಪುಣ್ಯ ಭೂಮಿ !
ಕಾಚಿನ ಮರಗಳ ಗುಂಪು, ಕಾಡು ಹಲಸಿನ ತೋಪು,
ಹುಣುಸೆಯ ವನ, ಮಾವಿನ ಬನ ಮೇಣ್ ಶಾಲ್ಮಲೀ
ವೃಕ್ಷರಾಜಿ ಸರೋವರಕ್ಕೆ ಸೂಡಿದ ದಿವ್ಯಶೋಭೆ !

ಅಃ ! ಭಗವಾನ್ ಶೂಲಪಾಣಿ
ವಾಸಿತ ಶೋಭಾಖನಿಯೇಂ ಸಾಮಾನ್ಯಮೇ ?
ಎನಿತು ಪ್ರಯತ್ನಿಸಿದರೂ ನಾಂ ವ್ಯರ್ಥಕಾಮಿ ;
ಹರಿಯದೀ ಕಾವ್ಯಲಹರಿ ಪ್ರಚ್ಛನ್ನ ವೇಗದಲಿ
ಬಗೆಗೆಟ್ಟು ಬರುತಿಹುದು ಕಂಗಳಿಗೆ ಕಡು ನಿದ್ದೆ.
ಬಿನ್ನಹಕೆ ಬಾಯಿಲ್ಲವೋ ಓ, ಮಹಾದೇವ !

ನೋಡಾ ನೋಡಾ,

ಗಿರಿಶೃಂಗ ನಿಮ್ನೋನ್ನತ ಪದವಿಸ್ತಾರದಲಿ
ಶತಾಯುಷಿ ಮಹಾನ್ ಬೋಧಿ ವೃಕ್ಷದೇವ!
ತಳದಲಿ ತುಂಬಿದೆ ನೆರಳು–ಬೆಳಕಿನ ಸಿರಿನೆಲೆ,
ವ್ಯಾಘ್ರಚರ್ಮವ ಹಾಸಿ, ರುದ್ರಾಕ್ಷಮಾಲೆಯ ಧರಿಸಿ,
ಪಿಂಗಲ ಜಟಾಧಾರಿ ಕನಕಾಂಬರ ಭೂಷಿತ
ಮಹಾಮುನಿ ವಿಶ್ವಾಮಿತ್ರ ನೈಮರೆತಿಹನದೋ
ಪ್ರಳಯಿತ ಧ್ಯಾನ ವಿಲಯ ಪರಮೇಕಾಂತದಲಿ!
ಶೋಭಿತ ಶಿರಮುಡಿ, ಪ್ರದೀಪ್ತ ಲಲಾಟದೇಶ.
ಅರೆದೆರೆದ ಶೋಣನಯನ, ಧೀರ ಗಂಭೀರ ಮುದ್ರೆ,
ತೆರೆದೆದೆಯಲಿ ಜನಿವಾರ, ಬಳಿಯಲಿ ಕಮಂಡಲು,
ವರತಾಪಸವೇ ಘನವೆತ್ತು ಬಂದವೋಲ್,
ಭಕ್ತಿ–ಜ್ಞಾನಂಗಳೇ ಮೈವೆತ್ತು ಬಂದವೋಲ್,
ತಾ ವಿರಚಿಸಿ ಪದ್ಮಾಸನ ಅಪೂರ್ವ ಭವ್ಯ ತೇಜ!
ತಿಳಿಗಾಳಿಯ ಮನೋಭವಕೆ ಅಲೆಗೂದಲಾಡುತಿವೆ;
ನೋಳ್ಪ ಕಣ್ ಅಶ್ರುತುಂಬಿ, ಭಕ್ತಿ ಭಾವ ಮೂಡಿ
ಹೃದಯಾದ್ರಿ ತಲ್ಲಣಿಸಿ ಪಸುರಪ್ಪುವವೋಲ್!
ಎನಿತು ದಿನಗಳಿಂದೆ ಕಷ್ಟ ಕಾರ್ಪಣ್ಯಗಳಂ
ಕಡೆದು ಬಂಡಿಳಿಸಿದ ದಿವ್ಯತಾಪಸವೋ;
ಎನಿತೆನಿತು ಸೈರಣೆಯ ಪರಮ ಲಕ್ಷ್ಯಸಿದ್ಧಿಯೋ;
ಆಚಂದ್ರಾರ್ಕ ಕೀರ್ತಿಮಾಲಾಧರ ಓ, ವರತಾಪಸ!

ನೋಡೆ ನೋಡೆ,

ಉಜ್ವಲ ತಪಃಶಕ್ತಿ ಜ್ವಲಿಸುತ್ತೇರುತ್ತೇರಿ
ದೀರ್ಘದೀರ್ಘಾಯತ ವಿದ್ಯುಲ್ಲತೆಯ ಹೋಲಿ,
ಮಹಾಪೂರ್ಣಂಬೊಕ್ಕು ಸುರವರರಂ ಕಾಡಿ,
ಸ್ವರ್ಗ ಚತುರ್ದ್ವಾರಂಗಳ್ ಧಗಧಗಿಸಲುರೆ
ಕಂಗೆಟ್ಟರಾ ಸುರಲೋಕದ ಸರರ್ಕಳ್!
ಒಡನೆ ಇಂದ್ರನಧ್ಯಕ್ಷತೆಯಲಿ ಸುರರು ಸಭೆ ಸೇರಿ
ವರಮುನಿ ತಪಂಗೆಡಿಪ ದುರುಳ ಸಂಚನೆ ಹೂಡಿ
ದೇವಕನ್ನಿಕೆ ಮೇನಕೆಯನು ಆಶೀರ್ವದಿಸಿ
ಬೀಳ್ಕೊಟ್ಟರು ಮಹಾಸ್ವರ್ಣದ್ವಾರಂ ತೆರೆದು!

ಕನ್ಯೆ ಧರೆಗಿಳಿಯೆ

ಘನ ಶ್ಯಾಮಲ ಕೇಶ ರಾಶಿ ಅಪರದೇಶ ರಕ್ಷೆ!
ಚಂದ್ರಮಲ್ಲಿಕಾ ಶಾಂತ ಲಾವಣ್ಯ ಮೂರ್ತಿ–
ಶುಭ್ರಧವಳ ವಸ್ತ್ರಧಾರಿಣೀ ವರಲಕ್ಷ್ಮಿಯೊಲು,
ಮಂಗಳ ಚರಣ ಭಂಗಿಯಿಂದೈತಂದು
ಹೆಜ್ಜೆಯ ಮೇಲೆ ಹೆಜ್ಜೆಯನಿಟ್ಟು, ಮೆಲುಹೆಜ್ಜೆ
ತೆಗೆದು ಮುಂಬರೆ ಲತಾಕಟಿ ಅಳುಕಿ-ಬಳುಕಿ
ಕಾಲ್ಗೆಜ್ಜೆ ಮಿಣುಕಿ ಝಣುಕಿ ನಾಣ್ಚಿದಳ್ ಕನ್ಯೆ!
ವನಸುಮಗಳ ತರಿದು ವಿರಚಿಸಿ ಪೂಮಾಲೆಯಂ
ಮುನಿಸನ್ನಿಧಿಗೈತಂದಳು ಸುರ ಸಂಜಾತೆ!

ಧ್ಯಾನಾವಸಾನಸಮಯೆ....!

ಅಹ ! ನೋಡಾ

ಧ್ಯಾನಾವಸಾನಸಮಯ ಮೇನಕಾಗಮನ
ತಂದಿತು ಪೂಮಾಲೆಯ ಕಂಪು ! ಮಾನಸ ಪೆಂಪು !
ಮೇಣ್ ಶಾಂತ–ಪ್ರಶಾಂತ ಪ್ರವೃತ್ತಿಯ ಸೊಂಪು !
ಕಡೆಗಾ ನೂಪುರದ ಝಂಕೃತ ಮೆಲುದನಿಯಿಂಪು !
ಮನಸರಸಿಯಲೆಯಲಿ ಅಲೆಯಲೆಯಾಗಿ ತೇಲಿ
ಎಚ್ಚರಿಸಿತಾ ಮುನಿವರನಂ ತಪೋನಿಷ್ಠೆಯಿಂ !
ಹಾ ....! ಎಂದು ಸುಯ್ಯುತ್ತಿರಲು ಸಮೀರಣಂ !

ಆನಂದಮಯ ಬ್ರಹ್ಮಾನಂದಮಯ

ಆನಂದಮಯ ಬ್ರಹ್ಮಾನಂದಮಯ
ಭವಲೋಕ ಹೃದಯಾದ್ರಿ !
ಜೀವಕೋಟಿಯ ಭಾವರಾಗದ್ವೇಷ
ಜಗದಾಶ್ರಯ ಕಣಾ !

ದಿವಾರಾತ್ರಿ ಮೇಣ್ ನೆರಳು ಬೆಳಕು
ಈಶನ ಕರುಣೆಯಲಾ
ಇನಶಶಿಗಳ ಉದಯಾಸ್ತ ಜೀವನ
ರಸರತಿಗೆ ಪುಷ್ಟಿಯಲ್ತೆ ?

ಮಹಾ ಜಗದ್ಧಾತ್ರಿಗೆ ಮಿಗಿಲಪ್ಪುವ
ಶ್ರೀಶಾಲಿನಿ ಇಹಳೇ ?
ಆ ಧೀರ ಕಲ್ಪನೆ ಬಹುದೆ ಮನದಲಿ
ಸ್ಥಿತಿಗತಿ ಹೀನವಾಗೆ ?

ಓವೊ !
ಆನಂದಮಯ ಬ್ರಹ್ಮಾನಂದಮಯ
ಭವಲೋಕ ಹೃದಯಾದ್ರಿ !

ಓ ಭವ್ಯ ಭಾರತಿ !

ಬಾಳ ಬನಕೆ ನೀರು ಹೊತ್ತು
ದೇಹ ಬಳಲಿ ಹಾದಿಯಲ್ಲಿ
ಕಲ್ಲ ಮೇಲೆ ಕುಸಿದು ಕುಳಿತು
ವಿಗಲಿತ ಹೂವನೆ ಹೋಲಿ
ಓ ಧರ್ಮ ಪರಾಯಣೆ !

ಕರಿಮಣಿ ಓಲೆ ಮೂಗುತಿ
ಹರಿದು ಮಾಸಿ ಕೆಡೆದ ರವಿಕೆ
ಹಸುರು ಕೆಂಪು ಉಟ್ಟ ಬಟ್ಟೆ
ಬೆವರು ಬಸಿದ ಮೈಯ್ಯ ಚರ್ಮ
ಹೇ ಅನಂತ ಶೃಂಖಲೆ !

ಬಾಳ ಬವಣೆ ತನುವ ತಡುಕಿ
ದುಃಖವೂಡಿ ಮನವ ಹಿಂಡಿ
ಕನಕ ತಪನೆ ಸುಟ್ಟ ವೋಲ್
ಹೀರಿ ರಕ್ತ ಮರಣಗತಿಗೆ
ಹೇ ಶಾಶ್ವತ ದುಃಖಿನಿ !

ಓ ಭವ್ಯ ಭಾರತಿ !

ಅಂದು ಕಾಣುತಿದ್ದ ಕನಸು
ಇಂದು ಒಡೆದ ಕನ್ನಡಿ ಚೂರು !
ಬಾಳು ಪಡೆದ ಕಾಮ ಕೋಟಿ
ದುಃಖವೆಲ್ಲ ತಲೆಯ ಮೇಲೆ
ಹೇ-ಅನುಕೂಲ ನಿಧಿ !

ಶತಸಹಸ್ರ ನಿಯುತಿ ಮಾಲೆ
ಜನ ಮಂದೆಯ ಅಮಿತ ನಿಂದೆ
ಸಿಡಿಲ್ದನಿಯ ಮಾರಿ ಪತಿಯು
ಬರುವ ಬಿಗಿದ ಮುಷ್ಟಿ ಹಿಡಿದು
ಹೇ ಸಹನ ಶೀಲೆ !

ನರನ ನಿಷ್ಠುರ ನ್ಯಾಯದಿಂ
ಕಡೆದ ಭಂಗ ಮಾಯೆಯಿಂ
ಉಕ್ಕಿ ಹರಿವ ನದಿಯ ತೆರಂ
ಶಿಥಿಲ ಜಡ ಚಿರಾಚರಿತಂ
ಹೇ ದುಃಖ ತರಂಗಿಣಿ !

ಜಗದ ನಡೆಯು ತರಲಗಾನ
ಸತಿಯು ಮನದಿ ವೀತಗಾನ
ಶುಕಪಿಕಗಳ ಮಧುರಗಾನ
ಲೇಖನಿ ಹಿಡಿಯೆ ಲಲಿತ ಗಾನ
ಹೇ ಕಾವ್ಯ ಮಾಧುರಿ !

ಓ ಭವ್ಯ ಭಾರತಿ !

ಜೌವ್ವನದ ಅಲಂಪು ಕರಗಿ
ದರಿದ್ರ ಬಾಳ ಹೊರೆಯಲಿ
ಪ್ರಾಣಲಕ್ಷ್ಮಿ ಅಶ್ರುಗರೆಯೆ
ತವ ಹೃದಯ ಬನದಲಿ
ಒಲಿಪೆ ಹೇ ತಪಸ್ವಿನಿ !

ತೇಯ್ದು ನಿನ್ನ ರನ್ನ ಜನ್ಮ
ಸಗ್ಗದುದಯ ಬಾಳ ಶಿವಗೆ
ಕುಶಲ ಕಲೆಯ ಭಾವದಿಂದೆ
ನಿತ್ಯ ಅಮಿತ ಸರಸ ಲೋಲೆ
ಹೇ ನಿರಂತರ ಮೋದಿನಿ !

ವಿದ್ಯೆಯಿಲ್ಲ ಬುದ್ಧಿಯಿಲ್ಲ
ಮೋಕ್ಷವನ್ನು ಬೇಡಲಿಲ್ಲ
ಬಾಳ ಭವ್ಯ ಹೊರೆಯಲಿ
ಕಣ್ಣು ಕಾಣುತಿರುವ ಕನಸು
ಬಂಧ ವಿಮೋಚನೆ !

ಮಕ್ಕಳು ಮರಿ ಬಂಧು ಬಳಗ
ಕಾವ ಶಕ್ತಿ ಭಾವ ಭಕ್ತಿ
ಹಿಂಡಿ ತನುವ ದ್ರಾಕ್ಷಿಯಂತೆ
ಹೊರುವೆ ನೀ ಬಾಳ ಹೊರೆಯ
ಹೇ ಅಂತರ್ಯಾಮಿನಿ !

ಓ ಭವ್ಯ ಭಾರತಿ !

ಕಾಣರದನು ಪುರುಷರಾರು
ಸವಿದು ಉಂಡು ತಿಂದು ತೇಗಿ
ಭೋಗಿಪರು ಚೆಂಡಿನೋಲೆ
ಅತ್ತ ಇತ್ತ ಒದ್ದು ಒದ್ದು
ಹೇ ಕಾವ್ಯ ಕಾಮಿನಿ !

ಬಾಳಿನಿಂದ ಅಂತ್ಯದೊರೆಗೆ
ಹಂತ ಹಂತದಿಂದೆ ನಿನ್ನ
ಸಾರವೆಲ್ಲ ಹೀರಿ ದಣಿದ
ಬಾಳ ದೋಣಿಯ ರಸಿಕ ಗುರು
ಹೇ ನಿತ್ಯನೂತನೆ !

ಹೊತ್ತು ಹೆತ್ತು ಸಾಕಿ ಸಲಹಿ
ಪೂವಿನೋಲ್ ಬೆಳಸೆ ನಿನ್ನ
ತಾಯಿ ಅನಿತು ಬವಣೆಬಟ್ಟು
ದಿನವದೂಡೆ ನೀನಾದೆಯಾ
ಪರರ ಪಾದದೂಳಿ !

ಭಾವ ಬಂಧ ಬಿಗಿದು ತಾರೆ
ಹೆಣ್ಣು ಗಂಡು ಒಂದೇ ತೆರಂ
ಅರ್ಥವೆಲ್ಲ ಸ್ವ ಅರ್ಥವೆನೆ
ಬಾಳು ಬದುಕು ಪುಣ್ಯಮಲ್ತೇ ?
ಹೇ ಸ್ಥಿರ ಗಾಮಿನೀ !

ಓ ಭವ್ಯ ಭಾರತಿ !

ನೆಚ್ಚಿ ಹೆಜ್ಜೆ ಮುಂದೆ ಇಟ್ಟು
ಭವದ ಬಂಧ ಕಿತ್ತು ಒಗೆದು
ಒಡವೆ ವಸ್ತು ಬಿಸುಟು ಆಚೆ
ಶಾಸ್ತ್ರ-ಸೂತ್ರ ತರಿದು ತೂರು
ಓ ನವ್ಯ ಭಾರತಿ !

ಕಲೆಯುಸಿರಿಗೆ ವಿದ್ಯೆ ಬುದ್ಧಿ
ಸುರಸ್ಥಿತಿಗೆ ಆತ್ಮಶಕ್ತಿ
ಜಡಿದು ತುಂಬಿ ಡಬ್ಬಿಯೋಲೆ
ದೀನ ದಲಿತರೆತ್ತು ಮೇಲೆ
ಓ ಭವತಾರಿಣಿ !

ಕಾಲ ದೇಶ ಕಡೆದ ಶಕ್ತಿ
ಮೇಲೆ ನಿನ್ನ ಭವ್ಯ ಶಕ್ತಿ
ಸಗ್ಗ ನೆಲೆಗೆ ದಾರಿ ತೋರೆ
ಪಂಜು ಹಿಡಿದು ಮುಂದೆ ನಿಲ್ಲು
ಓ ಭವ್ಯ ಭಾರತಿ !

ಸಿಂಧೂ

ಶಾಂತ ಶೀಲ ಸಂಧ್ಯೆ ; ಸುಶಾಂತ ಸಾಯಂ ಶಾಂತಿ.
ಭಾನು ಭುವಿಗಳಿಗೊರೆದು ಸರ್ವಮಂಗಳ ದೀಪ್ತಿ ;
ದಿಕ್ತಟದಂಚಿಗೆ ಹಚ್ಚಿ ಸುಂದರ ಹೊಂಗಾಂತಿ ;
ಸಾಲುಸಾಲಾಗಿ ಸಾಗಿವೆ ಸ್ವರ್ಣ ಮುಗಿಲೋಳಿ.
ಹೊನ್ನಿನ ತೆರೆಯಲಿ ಮಿನುಗುವ ' ಬೆಳ್ಳಿ ' ಅಲ್ಲಲ್ಲಿ
ಥಳಿಸಿ ಥಳಥಳಿಸಿ ಇಣುಕುತಿವೆ ಬಾನ್ದಳದಲಿ
ಮೂಡಿ; ಕೆನ್ನೀಲಿಯ ನೋಂಪಿನಲಿ ಮುದವ ತಾಳಿ.
ಧುಮುಧುಮಿಸಿ ಹರಿಯುವ ಜಲ ಗಾನಂ
ಕರ್ಣಪಲ್ಲವನೋಲೈಸಿ, ತರುಬಿ ಕಣ್ಗಳಿಗಾನಂದಂ
ಹರಿದಿದೆ ರಜತವಾರಿಯೊಲು ನದಿಶ್ರೀ ಸಿಂಧೂ !
ತಪೋವನದ ಶಾಂತಿಯಂ, ನಭೋ ಮಂಡಲದ
ರೀತಿಯಂ ಪ್ರತಿಫಲಿಸಿ ಹೃದಯಾಂತರಾಳದಿ
ಮೆರೆದಿಹಳದೋ ಜನವಾರಿಧಿಗೆ ಭವ್ಯ ಸಿಂಧುವಾಗಿ !

ನೈದಿಲೆ

ರೇಣು ತಳದಲಿ ಶುಭ್ರ
ಮನೋರಮ ಧವಳಿಮಾ!
ವರಶ್ರೀ ಮಧುಕರಂಡ
ಮೇಲೆ ಮಧುರ ಅರುಣರಾಗ!

ಉದಯಾದ್ರಿಯ ಮೇಗಡೆ
ಮರೀಚಿಮಾಲಿ ಮೂಡಿರೆ
ಬಿರಿವೆ ನೀನು ಹರುಷದಿ
ಭ್ರಮರಗಳಿಗೆ ಮಧುವ ನೀಡಿ!

ಕೆರೆಯಂಚಿನಲಿ ಅರಳಿ
ಏರುವೆ ಈಶನ ಮುಡಿ!
ಪುಷ್ಕರಣಿಯ ಮಧ್ಯೆ ಅರಳಿ
ನೀನಳಿಯುವೆ ವ್ಯರ್ಥಕಾಮದಿ

ಓ, ನೈದಿಲೆ! ಅರಳಿನ್ನ
ಹೃದಯ ಕಾಂತಾರದಿ
ನೀನಲಿವೆ ಅನುಗಾಲ
ದೇವದೇವನ ಪದತಲದಲಿ!

ಹನಿ ಹನಿ ಹನಿ ಹನಿ ಹನಿ ಶೋಭಾಖನಿ

ಶುಭ್ರ ಮನೋರಮ ಸರಳ ಸೌಂದರ್ಯ
ನೂಪುರದ ಕಿಂಕಿಣಿಯ ಝಂಕೃತಿಯ ಮಧುರ
ಮನೋಲ್ಲಾಸದಲಿ ಮೂಡಣ ಮಟ್ಟಗೈತಂದಳಾ
ಉಷೆ. ಆದೊಡೇಂ ? ಶತ ಸಹಸ್ರ ನಿಯತಿಯೋಜೆಯಲಿ
ಶಾಂತ-ವಿಶ್ರಾಂತ-ಗಂಭೀರ ವಿದ್ರುಮಶಾಲಿನೀ
ನಿಶಾರಾಣಿ ಇರಳಲ್ಲಿ ಎದುರುಗೊಳಲಾ ಉಷೆಯಂ.
ಆ ಚಿರಾಚರಿತ ಸಂಗಿನಿ ಸರಸ ಸೋದರಿ ನಿಲ್ಲದಿನಿತು
ಪಡಿನುಡಿಯದಂತು ಹಿನ್ನಡೆಯುತಲಿರೆ ಬಗೆಗೆಟ್ಟು
ಉಷೆ ಮೆಲ್ಲನೆ ಮುಂದಡಿಯಿಟ್ಟು ಉತ್ಕಂಠಿತ
ಮನೋದೃಷ್ಟಿಯಂ ಎರಚಿ ನೋಡೆ ನಿಶಾರಾಣಿಯಂ.
ಉತ್ಕೃತ್ತ ಉಲ್ಲಾಸೋನ್ಮಾದ ಶೋಕಾಮುದ್ರಮುಖಿ,
ಕಾಳಮೇಘಕೇಶಿನಿ, ತಮಾಲ ಪತ್ರಮಾಲಿನಿ,
ಕಾಲಿಮಾವೇಶಿ ನಿಶೆ ಮನೋದಧಿಗಚ್ಚರಿಯಂ
ತುಂಬೆ, ಭಾವನಾಮಯಿ ಉಷೆ ತಗ್ಗಿಸಲ್ ದಿಟ್ಟಿಯಂ
ಭೂಲುಂಠಿತ ಇಬ್ಬನಿ ಹನಿ ಹನಿ ಹನಿ ಹನಿ ಹನಿ
ಶೋಭಾಖನಿ ಸಮಸ್ತ ಭೂ ವಿಸ್ತಾರದಲಿ,
ರಾತ್ರಿಯಿಡೀ ನಿದ್ದೆಗೈಯ್ಯದಿನಿತು ನಿಶಾರಾಣಿ
ಸುರಿಸಿದ ಮಹಾ ಶೋಕಾಶ್ರು ಬಿಂದುಗಳಂತಪ್ಪ !
ಇಂತಿರ್ಪ ಸೋಜಿಗಮೇನೆಂದು ಬೆಸಸಿಯಾರೆನೆ
ಶಶಿತಾರೆ ತಳೆದಿವೆ ಮ್ಲಾನಮೌನ ಪರಿಧಿಯಲಿ.

ನಸುಚಿಂತೆಗೊಳಗಾಗಿ ಯೋಚಿಸಿದಳಿಂತು ಉಷೆ,
ಅಹಾ! ಇದೀಗ ಅರ್ಥವಾಯಿತು; ಪೋದಿರುಳು
ತನ್ನ ಜೊತೆಗೂಡಿರ್ದ ಮಳೆ-ಮಿಂಚು ಇಂದಿಲ್ಲದೆ
ರಾತ್ರಿಯಂ ಕಡು ವ್ಯಸನದಲಿ ಕಳೆದಿಹಳಾ ನಿಶೆ....
ಮನದೊಳು ಇಂತು ಮಿಂಚೆ ಗೆಳತಿಯ ದುಃಖಮೂಲಂ
ಹಾ! ನಿಡುಸುಯ್ದುಳಾ ಉಷೆ ಮುಂದಡಿಯಿಡುತಲಿ;
ಅದೇ ಸುಸಮಯೆ ಅದೃಶ್ಯಳಾದಳಾ ನಿಶಾದೇವಿ
ಹಠಾತ್ತನೆ ಪಯಣಿಸಿ ಅನನ್ಯ ಅನುಭೂತ ಜಗಕೆ!

ರುಂದ್ರ ಶ್ರೀದಿಗಂತಂ

ದೂರಾದ್ದೂರಂ ರುಂದ್ರ ಶ್ರೀದಿಗಂತಂ
ಚಂದ್ರ ಶೀತಲ ಧವಳ ಮೇಘಮಯಂ
ಕಮಲ ಪುಷ್ಪ ಸುಶೋಭಿತ
ಕಮಲಿನೀಂ, ಇಂದಿಂದಿರ ಝೇಂಕೃತ
ವರ ಸುಮನೋಹರ ನಿನಾದಂ !

ಓವೊ ! ಪೂರ್ವದಿಗಂತ ಮಹಾ ಸರಸಿಯೊಳ್
ಮೇಘವರ್ಣದ ಮುಗಿಲಿಂಗೆ ಹೊಂಬಣ್ಣವ
ಬಳಿಯುತ ಶೈಶಿರ ಉಷೆಯಿಾ
ಸ್ವರ್ಗ ಸ್ವರ್ಣದ್ವಾರಂ ತೆರೆದಿದೆ ನೋಡಾ !
ಶ್ರೀವಿಜಯಕೇತನದಲಿ !

ಸಮುಜ್ವಲ ಅರುಣೋದಯ ಸುಮನೋವರ್ಣಂ
ಸರಸೀರುಹ ಮಹಾ ಜಲ ವಿಸ್ತೀರ್ಣಂ
ಸರಸ ಸಂಸರ್ಗದಲಿ
ಸ್ವರ್ಣದ್ರವಮಾದಂತೆಸೆಯೆ ಕಣ್ಗಳಿಂಗೆ
ಮಹಾರಸಾಮೃತಮಲ್ತೆ ?

2

ಪ್ರಾತಃ ಪದ್ಮಿನಿಯ ವೈಭವಧಾರೆ ಅನುದಿನದ
ಮನೋಭವ ರಸದೌತಣವಾದರೂ
ಸಲಸಲವೂ ಪೊಸತೆಂಬಂತೆ
ಸವಿಯುವೆ ಶಿವ ಪ್ರಸನ್ನ ಮಹೋದಯದಲಿ
ಎನೆ ಮಂಗಳಮಪ್ಪುದು ಮನಂ !

ಮಿಂಚು ಹೊಂಚಾಡುತಿದೆ!

ಬನ ಬನದಲಿ
ಮನ ಮನದಲಿ
ತರು ನಿಕರದಲಿ
ಗಿರಿ ಶೃಂಗಗಳಲಿ
ಜಲ ತರಂಗಗಳಲಿ
ಗಗನ ಬಯಲಲಿ
ಎಲರ ಅಲೆಯಲಿ
ಮಿಂಚಾಡುತಿದೆ!
ಹೊಂಚಾಡುತಿದೆ!
ಎನಿತು ಸಂಕೋಚದ
ಮಿಂಚು ಹೊಂಚಾಡುತಿದೆ!

ಮಿಂಚು ಹೊಂಚಾಡುತಿದೆ!

ಬಂಗಾರದ ಬೆಟ್ಟದಲಿ
ಇರುವೆ ಹರಿದಾಡುತಿದೆ!
ಶೋಭಾ ಸಂಪತ್ತಿಯಲಿ
ಶೂನ್ಯ ದೃಷ್ಟಿಯ
ನರಕೀಟ ಹರಿದಾಡುತಿದೆ!
ಆತ್ಮಜ್ಞಾನದ ಜಲದಲಿ
ಮೃತ್ಯುಭೀತ ಮನ
ಮೆಲ್ಲನೆ ಮಿಂದೇಳುತಿದೆ!
ಗಂಗೆಯ ತಡಿಯಲಿ
ಮಲರು ಹೊರಳಾಡುತಿದೆ!

ಮಿಂಚಾಡುತಿದೆ!
ಹೊಂಚಾಡುತಿದೆ!
ಎನಿತು ಸಂಕೋಚದ
ಮಿಂಚು ಹೊಂಚಾಡುತಿದೆ!

ಸಂತೃಪ್ತಿ

ದೇವನೊಬ್ಬ ಒಲಿದು ಹರಸಿದರೆ
   ಸಾಕೆನ್ನ ಕಾವ್ಯಕಲಾ ಸ್ಫೂರ್ತಿ.
ಅಂತಿರಲಿ ಇಂತಿರಲಿ ಎಂತಿರಲಿ
   ಸಮರ್ಪಿಸೆ ಸರ್ವಂ ಪುಷ್ಪಮಯಂ
ಶ್ರೀ ಭಗವಚ್ಚರಣಾಂಬೋಧಿಗೆ !
   ದೂರದ ನೆಲೆಯ ಬೆಳಗಲೆಂದಾನು
ಉರಿಸೆನನುದಿನ ಎಮ್ಮಯ ಸೊಡರ ;
   ಬೆಳಗಿದರೆ ಬೆಳಗಲದು ತಂತಾನೆ
ನೆರೆಯೂರು ಮಂದಿಮಾರು ; ಅದರಿಂ
   ಬಹುದು ಸಂತಸ ಮನೋದಧಿಗೆ
ದಿಟಂ.   ಆದರದಕಾಗಿ ನಾಂ ಬಯಸಿ
   ಕೂಡೆ ಕಾರ್ಯಕಲಾಪಂ ಬದಿಗೊತ್ತಿ.
ಕತ್ತುರಿಯನಾಂತು ವೈಯಲಿ ಗಿಡ
   ಕೊರಗದು ಪರಿಮಳವ ತಾಂ ಪಸರಿಸೆ.
"ಕೆರೆಯ ನೀರನು ಕೆರೆಗೆ ಚೆಲ್ಲಿ" ತಾಂ
   ಧನ್ಯವೊಪ್ಪುದು ಕವಿ ಕೃತ ಕಜ್ಜಂ !

ಪೊಂಗುಳಿ

ಬನಗಳೆಡೆಯ ನಿಕರದಲ್ಲಿ
ಹಸುರುವೆತ್ತ ತಾಣದಲ್ಲಿ
ಸುತ್ತಿ ನಾನು ಬಳಲಿ ನಿಂತೆ.

. ಹರುಷ ತುಂಬಿ ಮನದ ಪಕ್ಕಿ
ರೆಕ್ಕೆಬಿಚ್ಚಿ ಪಾರಂ ದಾಂಟಿ
ಲೀಲೆಯಿಂ ಮೇರೆ ಮಿಾರ್ದು
ರಸ ಚಿಂತನೆಯ ವ್ಯೆಮೆಯಿಂ
ಮಲರ್ದು ಅಲ್ಲಿಂದಲ್ಲೀ
ಅಲೆಯ ಹತ್ತಿತು.

ಮಲೆಯ ಸಣ್ಣ ಹಾದಿ ಹಿಡಿದು
ಪಿರಿಯ ಗದ್ದೆಕೋಗಿಗೈದು
ವನ ಸಿರಿಯ ಸೊಬಗನೀಂಟಿ
ಮುದವ ಪಡೆದು ಬಟ್ಟೆಗೆಟ್ಟಿ
ಪ್ರಥಮಸವ ಪೀರ್ದವೋಲ್

ಭಾವ ಬಲಿತುನೋಡೆ
ಸುತ್ತಮುತ್ತ ಬನದ ಬೇಲಿ
ಮಧ್ಯೆ ಹರಿವ ರಜತವಾರಿ !
ನಳನಳಿಪ ಗದ್ದೆಯ ಕೋಗು ;
ಮೇಲೆ ಬಾನು, ಕೆಳಗೆ ಮುಗಿಲು ;
ಸರಸ ವಾಯು ; ಚತುರ ಪಕ್ಷಿ.
ಮನಕೆನಿತು ಮುದವ ತಂದಿತೋ !

ಎರಡು ರೆಕ್ಕೆ ಬಿಚ್ಚಿ ಅಗಲ
ಚಕ್ರಗತಿಯಲಲೆದು ತೇಲಿ
ನೆಲಕೆ ನೇರ ನೋಟ ಬೀರಿ
ಮಲೆತು ಉಲಿಯೆ ಜೇನ ಕಾರಿ
ಸರಳ ಸಲಿಲ ರಾಗ ಮಾಲೆ !
ಭಾವ ಜಗದಿ ಜೀವ ಮುಳುಗಿ
ಭಾವಭಾವ ಸ್ಪರ್ಧೆ ಹೂಡಿ
ಹಾರಿ ಮುಗಿಲ ತೆರೆಯ ಕೆಳಗೆ
ತೋರೆ ಸರಸ ರಾಸಲೀಲೆ !

ಪೊಂಗುಳಿ

ಬಿಟ್ಟು ಕಣ್ಣು ಮುಚ್ಚದಾನು
ದೂರದಿಂದ ನೋಡಲದನು
ದೊಡ್ಡ ಗಿಣಿಯ ಹೋಲಿ, ಮನದ
ತವಕ ಉಕ್ಕಿ ಮೇರೆ ಮೀರ್ದು
ನಿಂತೆನಲ್ಲೆ ಕಲ್ಲಿನಂತೆ !
ಗಗನದಲ್ಲಿ ಸುತ್ತಿ ಪಕ್ಷಿ
ಇಳಿದು ಇಳೆಗೆ ಗಿಡದಿ ಕೂರೆ
ನೋಡಲೇನು ಆ ....ಪೊಂಗುಳಿ ?

ಪೊಂಗುಳಿಗೆಂತುಟು ಬಂತೀ
ವಸಂತ ಲೀಲಾ ವೈಖರಿ ?
ಸರಸತಿಯ ವರಸುತ ಕೇಳೆ
ನಿನ್ನ ಕನ್ನವುರ ಸುರವಾಣಿ
ಇನ್ನೆಂತುಟು ಕಬ್ಬದೈಸಿರಿ
ಪೊಮ್ಮುವುದೋ ನಾಂ ಕಾಣೆ !
ನೀ, ನರ್ಮಶೀಲೆ ಪೊಂಗುಳಿ !
ಛದ್ಮವೇಶವೇಕೆ ನಿನಗೆ ?
ಸುರಪರ್ಣೀ ಗಿಡದಲಿಡೆ
ಬೇವಿನ ಪೂವಪ್ಪುದೇಂ
ಸುರಹೊನ್ನೆ ?

ಆಧ್ಯಾತ್ಮಿಕ ಗಂಗೋತ್ರಿ !

ಹಿಮಮಣಿ ಮಕುಟ ಮನೋಹರ
ಧವಲಿಮಾ ಮಹಾ ಶಿಖರ ಶ್ರೇಣಿ
ಸಗ್ಗದ ಜಟಿಲ ರಹಸ್ಯವರಿಯೆ
ನೀಲಿಮಾ ತೆರೆಯ ಮೇಗಡೆ
ಕೊರಳು ಚಾಚಿ ಇಣುಕತಲಿವೆ.
ನೋಡಾ ! ನೋಡಾ !

ಗೌರೀಶಂಕರ ಸನ್ನಿಧಿಯಲಿ
ಸಂಜನಿಸಿ, ಭೋರ್ಗರೆವ
ಸಾಗರದೋಲ್ ಹರಿಯುತಿದೆ
ಸನಾತನ ದಿವ್ಯ ಪ್ರಣವತೆಯ
ಮೂರ್ತರೂಪ-ಆಧ್ಯಾತ್ಮಿಕ ಗಂಗೋತ್ರಿ !
ನೋಡಾ ! ನೋಡಾ !

ಭದ್ರಾ

ಮೇಲೆ ಕರಿಬಾನು; ಕೆಳಗೆ ತಿಳಿನೀರು,
ಸುತ್ತಲೂ ಗಿರಿಶ್ರೇಣಿ ; ಹಾಸು ಬಂಡೆಯ
ಮೇಲೆ ಕುಳಿತು ನಾನು ಹೀರಿ ತಣಿದೆ
ದೃಷ್ಟಿ ಕಕ್ಷೆಯಲೋಡಿ.

ಜಲಶಿಲಾ ಮಂಜುಳರವ ತರಂಗಿಣಿ
ನಿರಂತರ ಸಂಭ್ರಮ ಸಲಿಲ ಯಾತ್ರಿ
ವನವನಾಂತರಗಳ ತಣ್ಣೆಳಲಲಿ
ಮಂತ್ರಲೋಲುಪವೀಚಿ.

ಕಾಲದೇಶ ವರ್ತಮಾನಗಳ ಕಂಡು
ಯುಗಕಲ್ಪಗಳ ಹಿರಿದೀಂಟೆ ಬಂಡುಂಡು
ಭಾವೀ ಶತಮಾನಗಳಲಿ ನೊರೆ ಚೆಲ್ಲಿ
ಹರಿವೆ ನೀಂ ಇಂತೆ.

ಭದ್ರಾ

ಬೆಂಗದಿರನ ಹೊಂಗದಿರಲಿ ಮಿಂಚಿ
ಸಕಲ ಚರಾಚರಗಳಿಗಾಶ್ರಯ ನೀಡಿ
ಪ್ರಕೃತಿಯಲಿ ಬೆಳ್ಳಿಯೆಳೆಯೊಲು ತೋರಿ
ಹರಿವಳ್ ಕಾಣ್ ಭದ್ರಾ !

ಪೂರ್ಣ ಚಂದ್ರೋದಯ

ಅದೋ ನೋಡಲ್ಲಿ ! ಪೂರ್ವೀಗಗನದಂಚಿನಲಿ
   ಸ್ವರ್ಣದುಂಡೆಯು ತೇಲುತಿದೆ ಬೆಳ್ಮುಗಿಲನೇರಿ !
ಬಾನಿಂದ ಭುವಿಗೆ ಇಳಿದಿದೆ ಚಂದ್ರೋದಯ ಲೀಲೆ-
   ಅಮೃತದಲಿ ಸ್ವರ್ಣವ ತೇದು ಲೇಪಿಸಿದ ಪೋಲ್ !
ಏಂ ಶಾಂತಿ ಇಲ್ಲಿ ? ನೆಲದಲಿ ಮುಗಿಲಲಿ ಬನದಲಿ
   ಹೂಗಳ ಮುದ್ದಿಸಿ ಮಕ್ಕಳ ಲಾಲಿಸಿ ಹೆಣ್ಗಳ ರಮಿಸಿ
ಹರಿದಿದೆ ಧರಿತ್ರಿಯಲಿ ಬೆಳದಿಂಗಳ ಮಹಾ ವ್ಯಾಪ್ತಿ !
   ಮನುಜ ಕೃತ ಕೃತಿ ಅವುದು ಸಾಟಿಯಪ್ಪುದಿದಕೆ ?
ಕೋಟಿ ಕೋಟಿ ವಿದ್ಯುತ್ ದೀಪಗಳಿಂದುರಿವ
   ನಗರದ್ದೇಶ ತನ್ನ ಕೃತಕತೆಗೆ ತಾನೇ ನಾಣ್ಚಿ
ತಲೆ ಬಾಗುತ್ತಿದೆ ! ರಾಕಾಚಂದ್ರ ರೋಚಿಯೆದುರು
   ಮಿಣುಮಿಣುಕುವ ಮಿಂಚಿನ ಛವಿಯೇಂ ? ತೆಗೆ ಪರಿಹಾಸಂ !
ಈ ಲೋಕವಂ ತೊಯ್ಸಿದ ಚಂದ್ರಾಮೃತ ಶಾಂತಿ ಅಖಿಲ
   ಜಾಗ್ರತ ಸ್ವಪ್ನವೋ ? ತ್ರಿಭುವನದ ಧ್ಯಾನಸ್ಥ ಸತ್ಯವೋ ?
                                    ಅಲ್ತಲ್ತು ಮಂಗಳೇ, ಸುಷಮಾ !

ಚೆಂಗುಲಾಬಿ

ಬ್ರಹ್ಮಲೋಕದ ಭ್ರಮಿತ ಭ್ರಮರ
ಮುಖಪದ್ಮ ಮಧುಲೋಭದಿಂ
ಚುಂಬಿಸೆ ಬೊಮ್ಮನರಸಿಯಂ
ದಂತವೊತ್ತಿ ಕಪೋಲದಲಿ
ಹರಿದ ಜೊನ್ನೀರು ಧರೆಗುರುಳಿ
ಚೆಂಗುಲಾಬಿಯೊಲು ಮೂಡಿ
ಜಡವ ಗೆಲ್ದು ಚೇತನ ದುಂಬಿ
ಕವಿಗೆ ನೀಡಿತು ಸ್ಫೂರ್ತಿ ಕಾವ್ಯಂ!

ಚೋರೆ

ವಿಗಲಿತ ಕುಸುಮ ರೇಣುವಿನಲಿ
ಚೋರೆಯ ಪದಚಿಹ್ನೆಗಳು ಮೂಡಿ,
ರೇಣುಪಟಲ ಚಿತ್ರಖಚಿತಮಾಗೆ
ವಾಸಂತೀ ದುಕೂಲದೊಲು ತೋರಿ
ಮಧುರಮಾಯ್ತೀಹೃದಯ !
ಗಿಡಗಿಡಗಳಲಿ ಗುಬ್ಬಳಿಸುವ
ಚೋರೆ ಎತ್ತಪೋದುವೋ ಕಾಣೆ
ನೆಲದಲಿ ಒಂದೆ ಅತ್ತಿತ್ತಲೆಯುತಿದೆ
ಅರಣ್ಯ ಸುಂದರಿಯೊಲ್ !
ವೈಮನ ಮರವಟ್ಟು ನೋಡೆ
ಮೃತ್ತಿಕೆ ಮೆತ್ತಿದ ಪುಲ್ ನವಿರಿನ ವನಹೃದಯ
ಚೋರೆಯ ಮಿಂಚುಲಿ ಹರಿಯೆ ತುಂಬಿತು ಮುದದಿ.

ಮುಸಲ ವರ್ಷ ಧಾರೆ !

ಧಾರೆ, ಧಾರೆ, ಧಾರೆ !
ಮುಸಲ ವರ್ಷ ಧಾರೆ
ಗುಡುಗು ಮಿಂಚು ಸಂಚು ಹೂಡೆ
ಮುಗಿಲು ಕಾರುತಿಹುದು ಧಾರೆ!

ಊರು, ಕೇರಿ, ನಾಡು,
ಬೆಟ್ಟ, ಬಯಲು, ಹಸುರು
ಮಳೆಯ ಬಾಣ ಜಾಲದಿಂದೆ
ತೊಳೆದು ಶುಭ್ರದಾವಿ ಲೀಲೆ !

ಉಗ್ರಪವನ ರೋಸಿ,
ಮಳೆಯ ಮಾರಿ ಕಾರಿ
ಸುರಿಯುತಿಹುದು ವಾರಿಧಾರೆ
ವಿಪಿನ ಚಿಕುರನಿಕರ ಸೀಳಿ !

ಮುಡಿಯ ಬಿಚ್ಚಿ ಕೆದರಿ
ಮೇಘ ಮಾಯೆ ಕುಣಿಯೆ
ಮಂತ್ರ ಜಾಲದೋಲೆ ಸುರಿದು
ತುಂಬಿ ಬಂತು ಕನಕವಾರಿ !

ಬಲ್ಮೆಯುಕ್ಕಿ ವಿಾರಿ,
ಮಲೆತು ನಿಂತು ನೋಡೆ !
ಎದೆಯಗಡಲು ತುಂಬಿ ಬಂತು
ಸರಸ ಸರಳ ಕವನ ಧಾರೆ !

ಭಾರತ ಮಾತೆಗೆ

ಕೇಳಿ ಬರಲುರೆ ನಿನ್ನ ಮಕ್ಕಳ ಹೀನ ಚರಿತ್ರೆ
ತಿಳಿದು ಬರಲುರೆ ದಿನದಿನ ಲಂಚದ ಹಂಚಿಕೆಯು
ಮೋಸ ಅನೀತಿ ಅಧರ್ಮಕೆಣೆಯೇ ಇಲ್ಲವೆನೆ
ತಪ್ಪಲ್ಲವೊ ಈ ಭುವಿಯಲಿ. ಕೇಳಿ ಕೇಳಿ ಸ್ಥೈರಣೆ
ತಪ್ಪಿ, ಬಗೆ ನರಳುವುದು ನೊಂದು ಅತಿ ದೈನ್ಯತೆಯಲಿ,
ನೆತ್ತರೆದೆ ಬೆಂದು ಬೊಬ್ಬಿಳಿಸಿ ಬಿಸು ಸುಯ್ಯುವುದು ;
ಮನಶ್ಶಾಂತಿ ಕಳೆದು, ಹದಗೆಟ್ಟು ವಿಪ್ಲವದಲಿ
ಕೊನೆಗೊಂಡು ಕಂಗಳಲಿ ಕಂಬನಿ ಹರಿಯುವುದು ;
ಓ ಭಾರತಿ ! ನಿನ್ನ ಮುಕ್ತಿಗಾಗಿ ಎನಿತು ಮಂದಿ
ಬಲಿಯಾದರೋ ಎನಿತು ಕಂಬನಿ ಹರಿಯಿತೋ ಅಂದು ?
ಇಂದು ನೋಡೆ, ಇಲಿಗಳೆಲ್ಲ ಹುಲಿಗಳು !
ಕುರಿಗಳೆಲ್ಲ ಕೇಸರಿಗಳು ! ಹಗ್ಗ ಹಾವಪ್ಪುದು !
ಇಂತಾದೊಡಂ ಗತಿಯೇನು ತಾಯಿ ? ಶಿಕ್ಷೆಯೋ
ರಕ್ಷೆಯೋ ನೀನೆಗೈ. ಚಿಂತಿತ ಕವಿಮನ ನಿಜ ಕಲ್ಕಿ!

ಓಂ ಶ್ರೀಂ ಹ್ರೀಂ !

ಪಥರಹಿತ ವನದೇಶದಲಿ ಸೆರೆಸಿಕ್ಕಿದ ಮಾರುತ
ಅರಸುತಿರ್ದ್ದ ಸುಪಥವನು ಮಾರ್ಗಾನುಕ್ರಮಣಕೆ.
ಶಾಂತ ಸಮುದಾಯದಿ ಅಲೆದಲೆದು ತರುಲತೆಗಳಲಿ
ಹಾದಿಯಂ ಪುಡುಕಿ ಬನಗತ್ತಲೆಯ ನೆಲೆವೀಡಿನಲಿ.
ಗಂಭೀರತಮ ವನವ್ಯೂಹದಲಿ ಸುಳಿಸುಳಿದು ಸುತ್ತಿ
ಗಿಡಮರಗಳಂ ಹಾದಿಯ ಕೇಳೆ "ಓ ಬಂಧುಗಳೇ,
ಹೇಳಿರಲ್ಲ ; ದಾರಿಯಲ್ಲಿದೆ ವನವಲಯದಿಂದಾಚೆಗೆ ?"
"ಪೋಗುವೆಯೇಂ ವಾಯುವರ್ಯ ? ಸ್ವಚ್ಛಂದ ವ್ಯವಹಾರಕೆ
ಇದುವೇ ಸ್ಫೂರ್ತಿಧಾಮುಂ ! ಮತ್ತೇಕೆ ಹಾದಿಯಂ
ಪುಡುಕುವ ಗೀಳುಂ ? ಇರು ಇಲ್ಲೆ, ತಪಂಗೈಯ್ಯುತೆ
ನೀಂ ವರಸಿದ್ಧಿ ಪಡೆಯುವನ್ನೆಗಂ." ಗಿಡಮರಗಳ
ಹಿತನುಡಿಕೇಳಿ ವನಲೀನನಾಗುತ ನುಡಿದನಾ
ಗೋಚರಾತೀತ "ವಿಮಲ, ಪೀತ, ಹಳದಿ, ನೀಲ
ಸುಮ ಮಂಜರಿಯ ಶೃಂಗಾರದಲಿ ರಸ ವಶನಾಗುತ
ತಪಸಿಯಾಗುವೆನಿಲ್ಲಿ ಎನ್ನಯ ಹೃದಯ ಬನಕೆ
ಸತ್ ಶಾಂತಿ ಸಿಗುವನ್ನೆಗಂ." ಒಡನೆ ಗಿಡಮರಗಳು
ಹರುಷದಿಂದುಲಿದುವು ಪ್ರಣವ ಮಂತ್ರ ಓಂ ಶ್ರೀಂ ಹ್ರೀಂ !
ವೀಚಿವಾಯು ಸುಯ್ದುನಾ ಅದ ಕೇಳಿ ಓಂ ಶ್ರೀಂ ಹ್ರೀಂ !

ಗೂಬೆ

ಓ ಕೇಳು ಕೇಳಿಲೆ
ಮಿತ್ರ.
ಏನೆಂಬೆ ವಿಚಿತ್ರವ ?
ತನು
ಬಂಧನದೊಳಿರೆ ಮನು.

ಇರುಳು ನಿನಗಾಯ್ತು
ನಾಕ ;
ಹಗಲು ನಿನಗದುವೆ
ನರಕ ;
ಸೃಷ್ಟಿ ನಿಯಮದಲಿ.

ನಿನ್ನ ಧ್ವನಿ ಕೇಳೆ
ಅಶುಭ !
ನಿನ್ನ ದರುಶನವಾಗೆ
ನರಕ !
ನರಕ ಚಿಂತನೆಯಲಿ.

ಗೂಬೆ

ಈಶನ ಸೃಷ್ಟಿಯಲಿ
ಪಕ್ಷಿ
ಮನುಜ ದೃಷ್ಟಿಯಲಿ
ವಕ್ರಿ
ಆದರೇಂ ಕಮನವಲ್ತೆ ?

ಜೀವ–ಬಂಧು ವಲಯ
ದಲಿ
ನೀನಹುದು ಪ್ರಕೃತಿಯ
ಶಿಶು
ಬದುಕೆಲೆ ಬಹು ಕಾಲ.

ಅತೀತ ದರ್ಶನ !

ಗೆಲಮಕ್ಕೆ
ಶುಭಮಕ್ಕೆ
ಭೂಷಣಂ
ಮಾನವ ಜನ್ಮಂ.

ರಸಾನಂದ ಭಾವುಕತೆಗೆ
ವಾಙ್ಮಯ ತನ್ಮಯತೆಗೆ
ಶತಶತ ಪಂಥವನೊಡ್ಡಿ
ಗಳಿಗೆಗಳಿಗೆಗೊಂದು
ಪುನರ್ಜನ್ಮ ಪಡೆದು
ಕಾಮರೂಪಿಯಾಗಿ
ಭಾವಜೀವಿಯಾಗಿ
ಸೂಕ್ಷ್ಮಾತಿಸೂಕ್ಷ್ಮವಾಗಿ
ನಿಚ್ಚ ಸೊಗದ
ಸುಗ್ಗಿಯನುಂಡು
ಮಂಕು ಮಾಯೆಗಳಿಗೆ

ಅತೀತ ದರ್ಶನ!

ಮರ್ತ್ಯವಾಗಿ
ಜ್ಞಾನದಾಹವಂ
ಕೋಂಟೆಗಟ್ಟಿ
ಕಾವ್ಯರಸಂ
ಈಂಟಿ ಈಂಟಿ
ಬಂಡುಂಡ
ಭ್ರಮರವಾಗಿ
ದಿನದಿನದಿನದಿನ
ಪರಿಪುಷ್ಟಿಯಾಗಿ
ಇಂದ್ರಿಯ ಕಡಲಂ ದಾಂಟಿ
ಎನ್ನಾತ್ಮಕಾಯ್ತುತೀತ ದರ್ಶನಂ !

ಸಂನ್ಯಾಸಿ

ಓ ಸಂನ್ಯಾಸಿ, ಕಠಿಣ ಸಾಧನೆಯ ಗರಡಿ
ಕೆಡೆದಿದೆ ನಿನ್ನ ಕತ್ತಲೆಯ ಗುಹೆ ಗುಹಂತರದಿ:
ಬಾರೈ ಹೊರಗೆ ; ತ್ರಿಭುವನ ಸೌಂದರ್ಯವದು ನಿನಗೆ
ಪರಮ ಸತ್ಯದ ಶೃಂಗಾರ ಖಗೋಲ ಕಾಂತಿ.
ಭುವಿಯ ಶಾಂತಿ ಭವ್ಯಾರಾಧನೆಗಹುದು
ದಿವ್ಯ ಕೇಂದ್ರಂ. ಕತ್ತಲೆಯ ಗವಿಯಲಿ ಧ್ಯಾನಿಸಿ
ಶಾಂತಿ ದೊರೆತರೇಂ ? ನಿಲುಕದೈ ಸತ್ಯಸತ್ಯನಿಧಿ.
ಭಾನು ಭುವಿ ಇನ ಶಶಿ ತಾರೆ ಗಿರಿ ವನ ಸಂದ್ರಾ
ವೀಚಿಮಾಲೆ ಶಾಲಿವನ ಭೂ ವಿಸ್ತಾರದಲಿ ;
ಶತಕೋಟಿ ಪಕ್ಷಿಗೀತ ಮುಖರಿತ ವಸಂತ
ಸಾಮ್ರಾಜ್ಯವೈ ಈ ಭುವಿ ಆತ್ಮ ದರ್ಶನಕೆ.
ಸೌಂದರ್ಯ ಪೂಜೆಯಿಂ ಭಾವ ದಿಗಂತದ ಸತ್‌ಚಿತ್
ಛವಿ ಮಿಂಚೆ ಧ್ಯಾನ ವಿಲಯದಲಿ ಒಪ್ಪುದು ಶಾಂತಿ ;
ಕಲೆಯು ಕಂಪು ತಟ್ಟದಲ್ಲದೆ ಇಹಪರ ಶೂನ್ಯಕಣಾ !

ಕಾಮಳ್ಳಿ

ಓ, ಅದೋ ! ನೋಡಲ್ಲಿ !
ಹಸುರು ಗಿಡದ ಹೊದರಿನಲ್ಲಿ
ಕಾಮಳ್ಳಿ ಹಾಡುತಿದೆ.
ಎನಿತು ಸವಿ ? ಎಂತು ಮಧುರ ?
ಭಾವಧಾರೆ ಉಕ್ಕಿ ಹರಿದು
ಜೀವ ಪುಟಿಯುತಿದೆ !

ರೆಕ್ಕೆ ಬಿಚ್ಚಿ ಪುಕ್ಕ ಒದರಿ
ಕೊರಳೆತ್ತಿ ಮತ್ತೆ ! ಕೇಳಿಲೆ,
ಆ ಪೆಂಪುವೆತ್ತ ಸುಸ್ವರ !
ಮರುವನದಿ ಹಸುರೇಳಿಸುತ
ಹಳೆಯ ಸ್ಮೃತಿಯ ಮೂಡಿಸೆ
ನುಡಿದಿದೆ ಬೆರಗುವೋಲ್ !

ಜೀವ ಬಂಧ ಭಾವ ಬಂಧ
ಸ್ವರಾನುಸ್ವರಗಳ ರಸ-
ತೀರ್ಥದಲಿ ಹೊಮ್ಮಿ,
ನನ್ನಿಯ ಘೋಷಣ ಮಾಡಿ
ಮುಕ್ತಿ ಪಥವ ತೋರುತಿದೆ
ಅಂತರಂಗವ ಗೆಲ್ದು !

ಅಃ, ಇಂದ್ರಿಯಂಗಳೆಲ್ಲವು
ಶ್ರವಣೇಂದ್ರಿಯವಾಗಿ
ವೈನವಿರೇಳಿಸುತಿದೆ !
ಇನಿತು ವೃಣ್ಮಯ ದೇಹದಿ
ಚಿನ್ಮಯನಿರುವ ಮಹಿಮೆಯನು
ತೋರುತಿದೆ ಕಾಮಳ್ಳಿ !

ಕೆಳದಿ

ಎಂತುಟು ಭಾವ ಬಲಿಯುತ್ತಿದೆ ಕೆಳದಿ
ಅಂತುಟು ನೆನಹು ಮೂಡುತ್ತಿದೆ ಜವದಿ;
ನಿನ್ನ ನಗಲಿ ಏಸು ದಿನಗಳಾದುವೊ ಸತಿ
ಆದರೂ ಕಾಂಬೆನಿಲ್ಲಿ ನಿನ್ನಯ ಪ್ರತಿರೂಪು!

ಹಸುರು ಗಿಡದ ನೆಲೆಯಲಿ ಹರಡಿ ಹೊಮ್ಮಿದೆ ಪಡಿ ನೆರಳು,
ದಲಿತ ನೀರೆ ಮಂಡಿಯೂರಿ ತಲೆವಾಗಿ ಕುಳಿತ ತೆರದಿ!
ಹರೆಹರೆಗಳ ನೆರಳು ಕಷ್ಟಸುಖಗಳ ಪಡಿಯಚ್ಚನೆ ಚೆಲ್ಲಿ;
ಗರಿಗರಿಗಳ ನೆರಳು ಕೂದಲು ಕೆದರಿದವೋಲ್ ತೋರಿ;
ಎಲೆಎಲೆಗಳ ನೆರಳು ದೇಹಭಾರದ, ಗೋಳನೆ ಸೂಸಿ;
ಕಡೆದಿದೆ ನಿನ್ನಯ ಜನುಮದ ಗೋಳ ಎಲ್ಲವು ನಿನ್ನನೆ ಹೋಲಿ!

ನೀನೆ ದುಃಖದ ಭರದಿ ಕುಸಿದು ಕುಳಿತಂತೆ ಕಾಂಬುದಿಲ್ಲಿ!
ನೆರಳು ಬೆಳಕು ನೆಯ್ದು ನವ ಚಿತ್ತಾರ ನಿನ್ನ ವೈಯ್ಯನು
ತೋರ್ಪುದಲ್ಲಲ್ಲಿ ಉಟ್ಟ ಚಿಂದಿಯಲಿ ಕರುಳು ಹರಿವಂದದಿ!
ದುಡಿವ ನಿನಗೆ ಉಡಲುಡುಪು ಇಲ್ಲವಾಯ್ತೇ ಓ ಸೋದರಿ!
ರಕ್ಷೆಯನೋಂತು ಬಾಳಿಗೊಲಿದೆ ಹೇ ಪರಮ ಯೋಗಿನಿ!
ನೀನೊಂದು ಬಗೆದಿರೆ ಬಗೆಯಲಿ ಬಿಧಿ ಇನ್ನೊಂದು ಬಗೆಯಿತಲಾ!

ಸುತ್ತಮುತ್ತ ಮುತ್ತಿನಂತೆ ಸುರಿದ ಇಬ್ಬನಿ ನಿನ್ನ ಕಂಬನಿ!
ಅತ್ತಲಿತ್ತ ಕೇಳಿ ಬರುವ ವಿಹಂಗದನಿ ನಿನ್ನ ಅಳುದನಿ!
ಮಂದ ಪವನ ಸುಳಿದು ಸುಯ್ಯಲದುವೆ ನಿನ್ನ ಬಿಸಿಯುಸಿರು!
ನೆರಳ ನೆಲೆಯ ದೂಳಿಯಲಿ ಕಾಣ್ಬ ಸಕಲಪದ ಚಿಹ್ನೆ,
ಬಾಳದೋಣಿಯ ಧೂರ್ತಗುರುವಿನ ಪದಘಾತದ ಚಿಹ್ನೆ!
ನಿತ್ಯ ನೂತನ ಪ್ರಕೃತಿ ಶಾಂತಿ ನಿನ್ನ ಪವಿತ್ರ ಆತ್ಮ ಶಾಂತಿ!

ನಿತ್ಯ ಕಾಳ ಛಾಯೆಯಲ್ಲಿ, ರಚಿತಭಂಗ ಧಾಮದಲ್ಲಿ,
ರುದ್ರ ದೃಷ್ಟ ಚಟುಲ ನೀತಿ; ಕಾಮ ಕ್ರೋಧ ಕ್ಷುದ್ರ ರೀತಿ;
ಕಾಲದೇಶ ಕಡೆದ ಲೀಲೆ; ಜಡ ಸಮಾಜ ಕೊಟ್ಟ ಬವಣೆ
ಅಚಲ ಶ್ರದ್ಧೆ ಅತುಲ ಭಕ್ತಿ ಪ್ರಳಯಿತ ಭವ ಬಂಧನದಿ
ಬಾಳು ಬದುಕು ಹಸನು ಮಾಡೆ ತನುವ ಪಣವನೊಡ್ಡೆ ನೀನು
ದುರವಸ್ಥೆಯೊಳಾಯ್ತು ಸಮಾಧಿ ವಿಧಿಯ ರಮ್ಯ ಜಾಲದಲಿ!

ಘೋರ ನಿಶ್ಚಲ ನೀರವತೆಯಲಿ ನೈಮರೆತು ನಿಂದ ಹಸುರಿಂದೆ
ವಿಗಲಿತ ದರುಗೆಲೆ-ಕುಸುಮ ರೇಣು ಅಂತ್ಯಪೂಜೆ ಮಾಡೆ,
ನಿನ್ನ ಜೀವನ ಯಾತ್ರೆಯ ಘೋರ ಚಿತ್ರ ತನುಮನ ತುಂಬಿ
ಕಣ್ಣೆವೆ ಮುಚ್ಚದೆ ನಿಂತೆ ದುಃಖಾಶ್ರು ಉಕ್ಕಿ ಬರೆ ಕಣ್ಗಳಲಿ.
ದಹಿಸಿ ವ್ಯಕ್ತಿತೆ ಬಾಳಿನ ಹೋಮಾಗ್ನಿಯೊಳಾನಂದವ ಹೀರಿ
ತಪ್ತ ಮನದ ಬೇಗೆಯಲ್ಲಿ ಎನಿತು ತಪವನೋಂತೆ-
ನಮೋ ಭೀಷಣ ಸಂನ್ಯಾಸಿನಿ!

ಹೃದಯ ದೇಗುಲ ತುಂಬಿ

ಹೃದಯ ದೇಗುಲ ತುಂಬಿ
  ಭವದೀಯ ದೇಗುಲ ನಲಿಯೆ
ಪರ ಕಲೆಯ ಸಿರಿಗೇಂ ಕೊರತೆ ?
  ಕಾಣ್ಬ ಕಣ್ ಸರಸಿಯಾಗಿರಲು
ಮನವಪ್ಪುದು ಬಂಡುಂಡ ಭ್ರಮರ ಕಣಾ !

ಕೆಲಸದ ಹಣಾಹಣಿಯುಲಿದ್ದವಳೆಂತೋ
ತೆಕ್ಕನೆ ಜಗದ್ವೈಸಿರಿಯಲಿ ಸಿಕ್ಕಿ
ಕಿಕಿಟಿಯ ಕಡೆ ನಿಣಿಕಿದೆನಕ್ಕೋ!
ಬಿತ್ತರ ಬಾನಿನ ಸುಂದರ ನೀಲಿ
ಸ್ವರ್ಗಲಕ್ಷ್ಮಿಯ ಸೌಂದರ್ಯವ ಹೋಲಿ
ಅಲೆದುಂಬಿದ ಸಮುದ್ರದ ತೆರದಿ
ಮೆರೆದಿದೆ ನೀಲಿಮಾ ಕೀರುತಿ!
ಮೇಘ ಮಾಲೆಯು ಸುಳಿವಿಲ್ಲದೆ
ಚಂದನರಾಗದ ಸಿರಿಯಿಲ್ಲದೆ
ನಿರ್ಮಲವಾಗಿರೆ ಗಗನ ಧಾತ್ರಿ,
ಹಾರಾಡುತ್ತಿವೆ ಕರಿಯ ಜೋಡಿ!
ತೇಲಾಡಿ ನಲಿದಾಡಿ ಹೊಂಚಾಡಿ
ಸೀಮೆಯೆ ಇಲ್ಲದ ವಿಸ್ತಾರದಲಿ
ನೆರೆ ಸುತ್ತಿ ವರ್ತುಲಾಕಾರದಲಿ
ದಿಗಂತದಂಚಿನಲಿ ಮಿಂಚಿ ಹೊಂಚಿ
ಶಶಿ ತಾರಾಳಿಗಳ ಕಾಮಿಸುವೊಲು
ಮೇಲೇರುತ್ತಿವೆ ಆ ಪಕ್ಷಿ!

ಸೃಷ್ಟಿಯಲಿ ಚುಕ್ಕಿಗಳಂತೆಸೆದು
ದೃಷ್ಟಿಯ ಕಕ್ಷೆಯಂ ದಾಂಟಿ
ಮನದೆಲ್ಲೆಯಂ ಹರಿಹಾಯ್ದು
ಹೃದಯದ ತಂತಿಯಂ ಮಿಾಂಟಿ
ಸುರಲೋಕದ ಹಾದಿಯಂ ಪೊಕ್ಕು
ಆಃ! ಇಲ್ಲಾದುವೊ ಶ್ರೀಪೂರ್ಣಂಬೊಕ್ಕು!

ಫಾಲ್ಗುಣ ರವಿ

ಪ್ರಾಚೀ ದಿಗ್ವಧುವಿನ ಹೇಮಂತ ಲಲಾಟದಿ
ಫಾಲ್ಗುಣ ರವಿ ಮೂಡಿ ಹೊನ್ನಿನುಂಡೆಯೊಲು ತೇಲಿ
ನೋಳ್ಪ ಕವಯತ್ರಿಯ ಕಣ್ಣಿಗೆ ರಂಗೆರಚಿ ಮೆರೆಯೆ
ಲಕ್ಷ್ಯ ಮತ್ತಾದುದು ತಾ ರವಿ ಛವಿಯೊಳಗಾಗಿ
ಮನ ಮಹಾ ಸರಸಿಯಲಿ ಭಾವ ಸಂಲಗ್ನವಾಗಿ.
ರಾಗಾರುಣತಾನ ಹೃತ್ ಜಲತೀರ್ಥದೊಳದ್ದಿ !
ಸೌಂದರ್ಯಾರಾಧನೆಯು ಮಹಾ ತಪಸ್ಸಿನಲಿ
ಕಾಮಕೋಟಿ ಕೆಡಕುಗಳೆಲ್ಲ ಬೆಂಕಿಯೊಳಗಿನ
ಒಣಕಟ್ಟಿಗೆಯಂದದಿ ಉರಿದುರಿದು ಸಾಯುತಿವೆ.
ಪೊ ! ಇನ್ನೆಲ್ಲಿ ಮಾಯೆ ? ಜಗವೇ ಎನ್ನೊಳಗಾಗೆ ?
ಹಿಗ್ಗು ಹೃದಯ ಮುಕ್ತ ಭಾವದಿಂ ! ತಗ್ಗು ಕಾಮ
ಸತ್ತ ತೆರಂ ! ವಿಶ್ವದೇಕ ಭಾವ ಮಹೋದಯದಿಂ !

ಭಾವ ಸಮಾಧಿ!

ನಾಡುಂ
ಬೀಡುಂ
ನುಡಿಯೆ
ತೂರಾಡಿ
ಜಡಿಯೆ
ಹೋರಾಡಿ
ಸಾಗುತಿದೆ
ಜೀವನ
ಬರಿಯ ಜೀವನ!

ಬಾಳಿಗಿನಿತು ಶೋಭೆಯಿಲ್ಲ
ಮಾತಿಗಿನಿತು ಅರ್ಥವಿಲ್ಲ
ಕೃತಿ ಕೃತ ಅರ್ಥ ವ್ಯರ್ಥ
ಸ್ವ-ಅರ್ಥ ಮಿಲ್ಲದಿರೆ
ಸ್ವ-ಅರ್ಥ ಪಡೆಯದಿರೆ.
ಕಾವ್ಯ ರಸ ಪಾನದಲಿ
ಮೋಕ್ಷ ಸುಧಾ ವಾಹಿನಿಯಲಿ
ಹೊತ್ತು ಕರಗಿತೆಂಬ
ಚಿಂತೆಗೇಂ ಅರ್ಥವುಂಟೇ?

ಭಾವ ಸಮಾಧಿ!

ಹೇಳಿ–ಕೇಳಿ
ಕೇಳಿ–ಹೇಳಿ
ಬೇಸತ್ತು
ಬಂಡೆದ್ದು
ಸಿಡಿದೆದ್ದು
ಶ್ರುತಿ ಸಂವೇದನೆಗಳಲಿ
ಹಾರಿ
ನೀಲಾಚಲದಲಿ
ತೇಲಿ
ಚಟುಲ ತರಂಗಗಳಲಿ
ಸುಳಿದು ಸುತ್ತಿ
ಸಯ್ತ್ತನಾಂ ಭಾವ ಸಮಾಧಿಗೆ
ಶ್ರೀ ಚರಣ ಕೃಪಾಂಬೋಧಿಯೊಳದ್ದಿ!

ಭಾದ್ರಪದ ಸುಪ್ರಭಾತ

ಭಾದ್ರಪದ ಸುಪ್ರಭಾತದಲಿ
ಶುಭವನೊತ್ತಿ ದಿಕ್ತಟದಲಿ
ತೆರೆಯಿತು
ಈ
ದಿನದಕ್ಷಿ!
ಮರಿ ಮುಗಿಲು ಎಳೆ ಬಿಸಿಲುರಿಗೆ
ಬೊಬ್ಬಿಳಿಸಿ ಕಾಯುತ್ತಿರಲು
ಏರಿತು
ರವಿ
ಪಲ್ಲಕ್ಕಿ!
ಕಾಳವರ್ಣ ವ್ಯೋಮಕೇಶ
ಎಳೆ ಬಿಚ್ಚಿ ಹರಡಿದವೋಲ್
ಗಗನದಿ
ನೆರೆ
ಉಕ್ಕುಕ್ಕಿ!

ಭಾದ್ರಪದ ಸುಪ್ರಭಾತ

ಅರುಣಾಯಿತ ಕಿರಣ ಮಂಡಲ
ನೀಲವೆತ್ತು ಹೊಳೆಹೊಳೆಯಿತು
ಜತನದಿ
ಮಿಗೆ
ಹರುಷದಿ !
ಮೋಹಿನೀ ಮದನ ಮಂಜರಿ
ಉದಿತೋದಿತ ಉದಯಾಂಗನೆ
ವರಸತಿ
ಸುರ
ಸರಸತಿ !
ನಮಿಸುವೆ ನಿತ್ಯ ಕರ್ಮಚಾರಿಣಿ
ಓ, ಪೀತ ವಸ್ತ್ರಧಾರಿಣಿ !
ನಮೋ, ನಮೋ !

ಕರ್ಮ

ನೀನೆ ಬಲಂ ಕರ್ಮಕೆ; ನೀನೆ ಚಿರಂ ಧರ್ಮಕೆ;
ಓ ಅನಂತ ಕರ್ಮಚಾರಿಣಿ! ಪ್ರಗತಿಯ ನಾಗಿನಿ!
ಅಮೃತಂ ಬಯಸಿ ದುಡಿದು ರಕ್ತ ಬಲಿಯಂ ನೀಡಿ
ಕರ್ಮತತಿಯ ಮರು ರಂಗದಲಿ ಕಟ್ಟುಕಟ್ಟಳೆಯ
ಶುಷ್ಕ ಆಚಾರ ವೇದಿಯಲಿ ಸಯ್ತು ಸಮಾಧಿಗೆ,
ಕರ್ಮ ಕಳೆಯದು ನೀನಳಿವನ್ನೆಗಂ ಕಾಮಿನಿ.
ಭಕ್ತಿ ವೈರಾಗ್ಯವಂ ಪೊತ್ತು ವೈಮರೆಯೆ ವಿಕಸಿತ
ಜೀವನದ ದಳ್ಳುರಿಯು ಬಿಡದು ನಿನ್ನನೆಂದಿಗೂ.
ನರನೆದೆಯ ಕಾಳಕೂಟಮೇಂ ಸಾಮಾನ್ಯಮೆ ಶುಭೆ?
ನಿನ್ನ ಸಂಕಲೆ ಪ್ರಗತಿಗೆ ಪ್ರತಿಬಂಧಕವಲ್ತೇ?
ತಥ್ಯಹೀನ ಅತಿಲೋಭ ಮೋಹ ಕುಟಿಲತೆ
ಸವೆಯದೆ ಕರ್ಮ ಸವೆಯದೌ ಓ ನವ್ಯಮಾನಿನಿ!

ರಜತಾದ್ರಿ

ಈ ಜಗದ ಜಂಝುಡದಲಿ
ತಿಣುತಿಣಿಕಿ ಹೋರಾಡಿ,
ಸೋತು ಬಗೆ ಬೇಸತ್ತು
ರಸಮತಿಯು ಕಂಗೆಡಲು
ವರಸತಿಯೇ ಬಾ ಇಲ್ಲಿ ;
ಇಹುದು ಶಾಂತಿ !
ದುಗ್ಧ ಸಮುದ್ರದ ಮೇಗಡೆ
ಹೊನ್ನರಾಜಿಯ ಸೊಂಪು
ಹರಿಯುತಿದೆ ಮನತಣಿಸೆ ;
ಬಳಲಿಕೆಯನು ತೊಡೆಯೆ
ಸುಳಿಸುಳಿದು ತೀಡುತಿದೆ
ತಂಪೊರೆವ ತಂಬೆಲರು ;
ಅರಿತು ನುರಿತು ಮನವನು
ಸಂತೈಸೆ ಈಶನಿಹನು ;
ನೀ ಯೋಚಿಸದಿನಿತೂ
ಬಾ ಇಲ್ಲಿ, ಶುಭೆ !

ಇದುವೇ ತಿರೆಯ ಮೇಲಿನ
ಸಗ್ಗದಾದಿಪತ್ಯವು ಎನೆ
ಅಚ್ಚರಿಯೇಂ ತಂಗೀ ?
ಬರಿದೆ ನೋಡು !
ಬಹುದು ತೃಪ್ತಿ !

ಮುಗಿಲಿಂಗೆ ಬಣ್ಣ ಬಳಿದು
ದಾರಿಗೋಕುಳಿ ಎರಚುತ
ದೂರ ಸಮುದ್ರದಂಚಿಗೆ
ಇಳಿಯುತಿರೆ ಬೆಂಗದಿರ
ನಿಜ ಸತಿಯೇ ಬಾ ಇಲ್ಲಿ;
ಮಲೆತು ನೋಡು !

ಹೊನ್ನ ರಾಜಿಯುಳಿಯುತಿರೆ
ಮುಗ್ಧಸೊಂಪು ಹರಡುತಿರೆ
ನಸುಗತ್ತಲು ಮುಸುಗುತಿರೆ
ಮುಗಿಲು ನಲಿದಾಡುತಿರೆ
ತಾರೆಗಳು ಮಿನುಗುತಿರೆ
ಮಂಗಳೇ, ನೂರಾರು,
ಚಿಂತೆಗಳ ಬದಿಗೊತ್ತಿ,
ಮನದಣಿಯೆ ತನು ತಣಿಯೆ
ನಿಂತು ನೋಡು !
ಬಹುದು ಶಾಂತಿ !

ಧರ್ಮ

ಓ ರುದ್ರ ಮನೋಹರ ನೀತಿ ನಿಯತಿ ಲೋಲೆ
ನಮೋ ಇಹಪರ ಧರ್ಮಾಧಿಕಾರಿಣೀ!
ಶರಣು, ಶರಣು ತವ ಚರಣಾಂಬೋಧಿಗಂ!
ಸಕಲ ಲೋಕ ಪ್ರಸನ್ನ ಭಯಂಕರ ವರ
ವಿಧಾನಂ; ನಿನ್ನ ಋತುಚಕ್ರ ವಜ್ರಬಂಧಂ.
ಹೇ ಎನ್ನಂತರಂಗ ಅಧಿಕಾರಿಣೀ!
ನಿನ್ನಾಣತಿಯು ರುದ್ರಾಧಿಕಾರದ ಧರ್ಮ-
ಹಿತ ಸ್ಫೂರ್ತಿಯಲಿ ಇನ ಶಶಿಗಳ ನಿಚ್ಚನಡೆ.
ಮಳೆಗಾಳಿ ಬಿಸಿಲು ಮಿಂಚು ಮೋಡಗಳೆಲ್ಲ
ಸಿಲುಕಿ ಧರ್ಮಚಕ್ರದಿ ತಾ ಮಹತ್ತಾದುವು.
ಮುದುಡುತಿದೆ ನಿನ್ನ ವೇದವಾಣಿಯು ಕೇಳಿ,
ಅಧರ್ಮದ ಮೊಳಕೆ ಪರಾಪರಗಳಲಿ.
ನಿನ್ನ ಪೂಜಿಪುದೆ ಭಕ್ತಿ; ನೀನೊಲಿವುದೇ ಶಕ್ತಿ;
ನೀನೆ ರಕ್ಷೆ ಧರ್ಮಕೆ; ನೀನೆ ರಕ್ತಿ ಮುಕ್ತಿಗೆ!

ಶರತ್ಕಾಲೀನ ಸುಪ್ರಭಾತ

ಶರತ್ಕಾಲದ ಸುಪ್ರಭಾತದಲಿ
ಹೊಂಗಾಂತಿಯು ಹೊನ್ಮಳೆ ಹರಿದು
ಶೈವಾಲರಹಿತ ಕಮಲಿನಿ ಥಳಥಳಿಸೆ
ಚೇತನ ಮಾಯ್ತೋ ಈ ಜಗ ಹೃದಯು!

ನಗೆಯೆತ್ತಿ ಮುತ್ತು ಸುರಿದಂತೆ
ಹಸುರು ಹಾಸಿದ ಬಯಲ ದೇಶದಲಿ
ಮಿನುಗುತಿವೆ ಹಿಮಮಣಿ ಅಲ್ಲಲ್ಲಿ
ಮಿಣು ಮಿಣುಕುವ ಹಣತೆಯು ಸೊಡರಿನೊಲು!

ರಸಮಯ ಗಳಿಗೆಯಲಿ ಪುಟಿದೇಳುತ
ಶುಕ–ಸಾರಿಕೆ–ಲಾವ–ತಿತ್ತಿರಿಗಳು
ಉಲಿಯುತ್ತಿವೆ ಮಧುರ ಕಂಠದಲಿ
ಕವಿ ಪ್ರತಿಭಾಶಕ್ತಿಯ ಬದಿಗೊತ್ತಿ!

ಯುಗಯುಗಗಳಿಂ ಇರುತಿರೆ ಕಲ್ಲು
ಗಮನಿಸರಾರೂ ಜಡವೆಂದವನು.
ಜ್ವಲಿಸೆ ಅರುಣಕಿರುಣ ಒಡಲಿನಲಿ
ಅರೆ ಚಣದ ಇಬ್ಬನಿ ಹಿರಿವಾಯ್ತು !

ಭಾವಿಸಿ ನೋಡೆ ಭಾವಾವೇಶದಿ
ಉಗಮವಾಯ್ತೋ ವಾಙ್ಮಯಲಹರಿ !
ಜಡ ಚೇತನವು ಮಿಡುಕುವಂದದಿ
ಕಾವ್ಯಕೌಶಲಲಹರಿ ಜಳಜಳ ಉಕ್ಕಿ !

ಜಾಜಿ

ಓ ಸ್ವರ್ಣಮಂಜರಿ ಜಾಜಿ!
ನಿನ್ನಯ ಸುಂದರ ಸೃಷ್ಟಿಯು ಜಗದ್ಭವ್ಯಕೆ
ಎನಿತು ಶ್ರದ್ಧೆಯಲಿ ಶ್ರಮಿಸಿದನೋ ಪರಬ್ರಹ್ಮ?
ರೇಖುರೇಖುಗಳ ಕೊರೆದು ಚಿನ್ನದಲಿ
ರೇಣುರೇಣುಗಳಾಗಿ ಹೊಂದಿಸಿ ಪೂವಿನೋಲ್
ಸಂಧ್ಯಾಪದ್ಮಿನಿಯ ಹೊನ್ನರಾಗದೊಳದ್ದಿ
ಉದಯ ಕಾಂತಿಯ ಮಾಧುರ್ಯವನಿನಿತು ಪೂಸಿ,
ಸತಿ ಸರಸತಿಯು ವಿದ್ಯಾ ಸೊಂಪನೆ ಎರವು ನೀಡಿ
ಲೋಕಾಲೋಕಂಗಳ ಸೌಗಂಧಂ ಬಳಿದು,
ಎನಿತು ಮೋಹ ಮಮತೆಗಳಿಂದೆ ಸೃಷ್ಟಿಸಿ ನಿನ್ನ
ಕೊಡುಗೆಯಾಗಿತ್ತನೊ ಹಸುರಿಂಗೆ ನಲ್ಮೆಯಿಂ:
'ಜಾಜಿ' ಎಂಬ ನಾಮಧೇಯವ ಬಿತ್ತರಿಸಿ
ಎದೆಯ ಪೆಂಪಿನ ಕಂಪು ಸೂಸಿ ಸಂಭ್ರಮದಿ

ಜಾಜಿ

ಓ ಜಾಜಿ! ನೀನಿನ್ನೆಂತಹ ಪುಣ್ಯಾವನಿ?
ನೀನಲ್ತೆ ರಣರಣಿತ ಶೋಭಾ ವಿಧಾಯಿ?
    ಈಶನ ಕೊರಳ ಹಾರದಲಿ ಶೋಭಿಸುವೆ
    ಮೇಣ್ ದೇವದೇವಿಯರ ಮುಡಿಯನೇರುವೆ
ಆದೊಡೇಂ? ಸುತ್ತಮುತ್ತ ಸೂಜಿಯನೋಲ್ವ
ಮೊನಚು ಮುಳ್ಳು! ನೀನತ್ತಲಿತ್ತ ಸರಿದರೆ
    ಚುಚ್ಚಿ ಚುಚ್ಚಿ ಘಾಸಿಗೊಳಪ ದಿಟ್ಟ ಹೆಮ್ಮೆ!
    ಸುರಿಯುವ ಕೆನ್ನೀರಿಗೆ ಕೈಯೊಡ್ಡುವ ಕನಸು!
ನಿನ್ನಂತುಟು ಸೃಷ್ಟಿಸಿ ಮೇಣ್ ಪ್ರತಿಷ್ಠಿಸಿ
ಮುಳ್ಳಿನ ಜಾಲದಲಿ ಸೆರೆಗೈದನೊ ವಿರಿಂಚಿ!
    ಜಗದ ಬಗೆಗಣ್ಣಿಗೆ ನೀನೆಂತ ರಸಪುಷ್ಟಿ?
    ನೀನೆಂತಹ ಪರಮ ಪೂಜನೀಯ ಪುಷ್ಪವೋ?
ಓ ವರ ಸುಂದರ ತರಳೆ! ನಿನ್ನ ಬಾಳೂ
ಅಂತೇ ಅಲ್ತೆ? ಪೆರ್ಚದಿರು ಜವದಿ ಓ ಭಾರತಾವನಿ!

ಅದುವೇ ಸಗ್ಗಕೆ ಸೋಪಾನ ಕಣಾ!

“ತ್ಯಜೇದೇಕಂ ಕುಲಸ್ಯಾರ್ಥೇ
ಗ್ರಾಮಸ್ಯಾರ್ಥೇ ಕುಲಂ ತ್ಯಜೇತ್
ಗ್ರಾಮಂ ಜನಪದಸ್ಯಾರ್ಥೇ
ಆತ್ಮಾರ್ಥೇ ಪ್ರಥಿವೀಂ ತ್ಯಜೇತ್”
ಪ್ರಾಚೀನ ಸ್ತವಸುಧಾ ವಾಹಿನಿಯಲಿ
ಹರಿದು ಬಂತೋ ಚಿರನೂತನವಾಣಿ
ಕೃತಕೃತ್ಯ ಪರಮೇಕಾಂತದಲಿ
ಯೋಚಿಸೈ ಭಾವಿಸೈ ಓ, ವೀರವರ!
ಭವ್ಯ ಭಾವನಾ ಸುರಸಾಮ್ರಾಜ್ಯದಲಿ
ಸಕಲ ಜೀವೇಶ್ವರ ತತ್ತ್ವವನರಿಯೆ.
ಮನಃಪ್ರಾಣಗಳ ಚಿರಂತನಕೆ
ಸ್ವಾರ್ಥಲೇಪವಂಟದಂದದಲಿ
ನರಂ ಬಾಳ್ಗೆ ತ್ಯಾಗನಿಷ್ಠ ಜೀವನದಿ
ಅದುವೇ ಸ್ವರ್ಗಕೆ ಸೋಪಾನ ಕಣಾ!

ಅಶೋಕವನ

ತಣ್ಣೆಳಲ ತಂಪೂರೆವ ಪಥಹೀನ ತರುರಾಜಿ.
ಬನಗತ್ತಲೆಯ ಬೀಡಿನಲಿ ನಿಶ್ಶಬ್ದ ಸಾಮ್ರಾಜ್ಯ!
ಮೇಣ್ ಪಕ್ಷಿಗಳಿಗೆ ಸಂಭ್ರಮದಾಶ್ರಯ ಮಾಣೊ!
ಇರಲಿಲ್ಲಿ ಶಿವಾಲಯಂ; ಹುಗಲಿಲ್ಲ ಬಿಯದಂಗೆ.
ಕೊಲ್ವ ಕಲೆಗಳ ಬನದಾಚೆ ಇಟ್ಟರೆ ಹಕ್ಕಿಗಳು
ಸುಖ ಸಂತೋಷದಿಂದುಲಿವುವು ಶಿವಪೂಜೆಯಲಿ.
ರಕ್ತಾರುಣ ಸುಮ ಶೃಂಗಾರಕರೀ ಅಶೋಕವನ
ನಭಶಾಂತಿಯಲಿ ತೇಲಿ, ಮೆರೆಯೆ ನಂದನವನ-
ವಂ ಮೀರಿ; ವನಲೀನನಾಗಿಹನದೋ ಕಂತು!
ತವಸಿಯಲಿರುತಿರೆ ಮಮಭಾವ ಕರಗಿತಾನಂದ
ಸರಸಿಯಲಿ ಸ್ವಚ್ಛಂದ ಶಾಂತಿಯಂ ಪಡೆದು, ಓ ಮಮ
ಬಂಧು! ಈ ಬನದೈಸಿರಿಯೇ ಶಾಂತಿಗೆ ಸಿಂಧು!

ಅಹ! ನಾಣ್ಚದೆ ನಲಿ!

ಹಕ್ಕಿ! ಮತ್ತೊಮ್ಮೆ ಉಲಿ!
ಅಹ! ನಾಣ್ಚದೆ ನಲಿ!
  ಬೆಚ್ಚಿದೆನ್ನ ಮನ ನಲಿಯೆ!
  ನೆಚ್ಚಿದೆನ್ನ ತನು ತಣಿಯೆ!
ಇಲ್ಲಿಗೆ ಬಂದಿಹೆನಯ್ಯೊ!
ಭವ ಜಲಧಿಯೊಳು ತೊಳಲಿ
    ನಿನ್ನ ಇನಿದನಿ
    ಜೀವದೈಸಿರಿ!
    ರಸಮಂಜರಿ!
ಹಾಡು ಹಕ್ಕಿ! ಭಾವವುಕ್ಕಿ!
ಮಿಂಚುಲಿ ತರಲೆನ್ನ ಮನಕೆ
ದಿವ್ಯ ಚೇತನ ವಾರಿಧಿ!
    ಪುಟ್ಟ ಹಕ್ಕಿ.
    ಬಣ್ಣದ ಚುಕ್ಕಿ.
    ನನ್ನ ಕಕ್ಕಿ!

ಅಹ! ನಾಣ್ಚದೆ ನಲಿ!

ರಸವತಿಯೆ, ಹಾಡು ಇನ್ನೊಮ್ಮೆ;
ನಿನ್ನ ಗಾನಲಹರಿಯುಕ್ಕಿ
ನಾಡಿ ನಾಡಿಯಲಿ ಮಿಡಿದು
ಸ್ಪಂದಿಸಿ ಜಗತ್ ಚೇತನ
ಹರಿಸಲಿ ಹರುಷ!
ಮುಗ್ಧ ಭಾವದಲಿ ಜ್ವಲಿತ
ದೀಪ್ತಿ ಉರಿಯಲಿ!
ನಿದ್ರಿತ ಚೇತನ ಹೆಡೆಯೆತ್ತಿ
ನಿತ್ಯ ಬೆಳಗಲಿ!
ಒಲಿದು ಹಾಡು!
ಕುಣಿದು ಹಾಡು!
ಓ, ಎನ್ನ ಹಕ್ಕಿ!
ಮಧುರ ಭಾವಲಹರಿ ಹರಿಸಿ
ಬತ್ತಿದೆನ್ನ ಹೃದಯ ಬನಕೆ
ಹೊಯ್ದು ಹೊನ್ನವಾರಿ
ತೊಳೆಯುವಂತೆ ಜಡದ ಜಿಡ್ಡು!
ಹಕ್ಕಿ! ಮತ್ತೊಮ್ಮೆ ಉಲಿ!
ಅಹ! ನಾಣ್ಚದೆ ನಲಿ!

ಕಾರ್ಗಲ್ಲು

ಬನದಲಿ ಬಯಲಲಿ
ಬೆಚ್ಚನೆ ಬಿಸಿಲಲಿ
ತಣ್ಣನೆ ಮಳೆಯಲಿ
ಕರಗದೆ ಚಲಿಸದೆ
ಉಳಿದಿವೆ ಅಲ್ಲಲ್ಲಿ
ನಿತ್ಯ ವಿರಾಮದಲಿ
ಅಕಳಂಕಿತ
ಅಗಣಿತ
ಕಾರ್ಗಲ್ಲು !

ಕರ‍್ರಗೆ ಬೆಳ‍್ಳಗೆ
ಹಚ್ಚಗೆ ಕೆಂಪಗೆ
ದಪ್ಪಗೆ ದುಂಡಗೆ
ಬಿಮ್ಮಗೆ ಬಿಗಿದು
ನೆಟ್ಟಗೆ ನಿಂತು
ಕಲೆತು ಮಲೆತು
ಫಳಫಳ ಹೊಳೆದು
ತಾಂ ಮೈಮರೆತು
'ಇರು' ವಾಸೆಯಲಿ
ಮಲಗಿವೆ ಮೈದಾಳಿ !

ಜರ್ಬರಾ

ಓ ಶತದಳ ಸೌಧಾಮಿನಿ ಬಭ್ರುವರ್ಣ ಜರ್ಬರಾ !
ಲಾವಣ್ಯಲಕ್ಷ್ಮಿಯೋಲ್ ನೀಂ ಸೆಳೆವೆ ಮನವ ಸರ್ವದಾ !
ತೆಂಕಗಾಳಿ ಬಿಂಕದಿಂದ ಬೀಸೆ ಅಲೆಯಲೆಯುಪ್ಪಿ
ಮುದವ ಸೂಸಿ ನೀ ನಲಿನಲಿವೆ ಓ ಪುಷ್ಪಯೋಗಿಯೆ !
ದಳಗಳರಳಿ ಇರುಳು ರನ್ನದ ರೇಖುಗಳಂದದಿ
ನವ ಕಾಂತಿಯು ಚೆಲ್ಲಿ ಹಸುರಿನ ವರ ಪೀಠದಲಿ.
ಪ್ರಾತಃಸೂರ್ಯನ ಅರುಣಾಯಿತ ಕಿರಣಧಾರೆ ಜ್ವಲಿಸಿ
ತೃಣಗಣ ಶಿರದಲಿ ಹಿಮಮಣಿಗಳು ಕಿಡಿಕಿಡಿಯುಪ್ಪಿ,
ಉರಿದಿವೆ ಮನಸೋತು ತವ ಮನೋಜ್ಞ ವೈಭವಕೆ !
ಮೇಣ್ ರಸಪುಷ್ಟಿಯು ಸಂಭ್ರಮದ ಶೃಂಗಾರಕೆ !
ವನಮಾಲಿ ನಿನ್ನ ತಡಿಯಂ ಕಳೆಯ ಕಿತ್ತು ನೀರು ಹೊಯ್ದು
ಶ್ರಮಿಸಿ ದಿನದಿನ, ಮನದಿ ತುಂಬಿ ಲಾಭದಾಸೆಯಂ
ಓ ಪೂವೇ ! ಇಂದೊ ನಾಳೆಯೊ ನಿನ್ನ ಜನಸಂತೆಗೊಯ್ದು
ಮಾರಿ ಬಿಡುವನಲ್ತೇ ಮಾಲಿ ಪುಡಿಗಾಸುಗಳಿಗೆ ?
ಹಾ ! ಕಷ್ಟಂ, ಕಡು ಕಷ್ಟಂ ! ನಿನ್ನ ಕೊಲೆಯು ಸಂಚಿಕೆ
ಓ ಶತದಳ ಸೌಧಾಮಿನಿ ಬಭ್ರುವರ್ಣ ಜರ್ಬರಾ !

ಕೇಳ್ ಕಮಲೆ !

ಕೇಳ್, ಕಮಲೆ !

ಕೋಟಿ ಕೋಟಿ ಅಬಲೆಯರ ರಕ್ಷೆ
ಲಕ್ಷ ಲಕ್ಷ ನಿರೀಹ ಶ್ರಮಣರ ರಕ್ಷೆ
ಸನಾತನ ಹಿಂದೂ ಧರ್ಮದ ರಕ್ಷೆ
ನ್ಯಾಯ ಪ್ರಾರ್ಥನೆಯಿಂದೆ
ಅನುನಯ ವಿನಯದಿಂದೆ
ಶಾಸ್ತ್ರೋಕ್ತಿಯ ಉದ್ಧರಣದಿಂದೆ
ಆಗದೈ, ಮಾಗದೈ.

ಕೇಳ್, ಕಮಲೆ !

ನ್ಯಾಯಕಾಗಿ ಪ್ರಾಣವನು
ಧರ್ಮಕಾಗಿ ಧನವನು
ಸತ್ಯಕಾಗಿ ಸ್ವಾರ್ಥವನು
ಬಲಿಗೊಡು ಮಂಗಳೆ
ಸಕಲ ತ್ಯಾಗವೇ
ಈ ಜೀವನದುದ್ಧಾರ.
ಮೇಣ್ ಜಗದೋದ್ಧಾರ.

ಉದಯ ಚಂದ್ರಮ

ದಿವಾ ರಾತ್ರಿಗಳ
ಲೀಲಾ ಖೇಲನ
ಸರಸ ಸುಂದರ
ತಾನವಿತಾನದಲಿ,
ಬಾನ್ ಬಯಲಿನ
ನೀಲ ಕೌಶೇಯು
ರುಂದ್ರ ವಿಸ್ತಾರದಿ,
ಉದಿಸಿ ಬಂದುವು
ಸಾಸಿರ ಸಾಸಿರ
ನೂತನ ತಾರಾಳಿ !
ಪೂರ್ವೀ ಗಗನದ
ಮೇಘ ರಾಶಿಯು
ಶಾಂತಿ ಧಾಮದಲಿ
ಪೀತಾಭ ರಶ್ಮಿಯು
ಕಾಂತಿಯು ಚೆಲ್ಲಿ
ಬೆಂಕಿಯುಂಡೆಯೊಲು
ಪ್ರದೀಪ್ತವಾಯಿತು
ಮೂಡಿ ಮೇಲೈತರೆ
ಉದಯ ಚಂದ್ರಮ !

' ಇರು 'ವೆ ಗುರಿಮುಟ್ಟುವನಕ

ತುಷಾರಗಿರಿಯೋ ದ್ರವೀಭೂತವುಪ್ಪು
ಧುಮುಧುಮಿಸಿ ಝುಳಝುಳಿಸಿ
ಥಳಥಳಿಸಿ ಹರಿವ ವೋಲ್
ಕಣ್ಗೆಸೆಯುತಿದೆ ಯಮುನಾ ವಾರಿಧಿ !

ಸರಸ್ವತಿಯು ಕರ್ಪೂರ ಕಾಂತಿಯಂ
ಎರವು ಪಡೆದಂತೆ ಹೊಳೆಯುತಿದೆ
ಕಿರು ಬೆಟ್ಟದೊಲ್ ವ್ಯೆವೆತ್ತ
ನಿಮ್ನೋನ್ನತ ಫೇನ ರಾಶಿ !

ತಟದಲಿ ಕ್ರೌಂಚ ಕಲಹಂಸಗಳು
ಉಲಿಯುತಲಿವೆ ಮಧುರ ಸ್ವನದಲಿ.
ಶಿವನ ಸ್ಮಿತಧಾರೆಯೊಲು ಹರಿದು ಬರಲು
ಮುಂಬೆಳಕು ಮೂಡಣ ದಿಗಂತದಲಿ !
ಹಸುರೊಸರುವ ನಾನಾ ವೃಕ್ಷರಾಜಿಯು
ಪ್ರತ್ಯಗ್ನ ಸ್ಥಾನದಿ ಎಳೆದಳಿರು ಹೊಳೆಯುತಿದೆ
ಅರುಣೋದಯದ್ಯೆಸಿರಿಯಲಿ ನೋಡಾ !

ಇಂತಿರೆ ಸುರಸುಂದರ ಪ್ರಾತಃಸ್ಸಮಯ
ಕೋಟಿ ಕೋಟಿ ಮಿಂಚುಗಳಂದದಿ
ಮಿಂಚಿ ಉದಯರವಿ ದಯ ಮಾಡಿಸಿದ,
ನಗೆ ಮಿಂಚಿನ ಸವಿಗೊಂಚಲ ಚೆಲ್ಲಿ.

ನಿನ್ನೆಯ ಮೊನ್ನೆಯ ಮಳೆಯಲಿ ಮಿಂದು
ಮರದಲಿ ಬನದಲಿ ಬಯಲಲಿ
ನೆನೆಯಲಿ ತೆನೆಯಲಿ ಹುಲ್ಲೆಸಳಲಿ
ಪದ್ಮಪತ್ರದ ಸಲಿಲ ಬಿಂದುವಿನೊಲು
ಹೊಳೆ ಹೊಳೆಯುತಿವೆ ಜಲಬಿಂದು !

ನೋಡೆ ನೋಡೆ ವಿಸ್ಮಯ ಮೋಹಾಗ್ನಿಯಲಿ
ಮೈ ಮರೆತು ಮುದವ ತಾಳಿತು ಮನವು;
ನಿರ್ನಿಮೇಶ ನಯನಗಳಲಿ ನಿಶ್ಚಲ ಭಾವ ಮಿಂಚಿ
ಒಡಲ ಪಾರದಲಿ, ಬಲ್ಮೆಯುಕ್ಕಿ ಮಿಾರೆ
ದುರ್ಭರ ಜೀವನದ ಕಟುಸತ್ಯದಾಗರವ
ಕಂಡೆನೋ.... ಕಂಡೆ !

ಬುದ್ಧಿ ಭಾವ ಉಳಿಯೆ ತನುಮನ ನಲಿಯೆ
ಬದುಕು ಸಂಪದವಾಗೆ, ಶಾಂತಿ ಜಲಧಿಯಲಿ
ಮಿಂದೇಳೆ ಬದುಕುವುದೊಂದೇ ಜೀವಗೆ ಗುರಿಯು ;
ಪ್ರಕೃತಿಯೈಸಿರಿಯಿರೆ ಸಂಕಲ್ಪಕೆ ಚ್ಯುತಿಯಿಲ್ಲ ;
ಮೇಣ್ ಧರ್ಮಕೆ ಭಯವಿಲ್ಲ ; ಮಧುರಾನುಭೂತಿಯ
ಶ್ರೀಪಥವಲ್ಲದೆ ಸತ್ಯಕೆ ಗತಿಯಿಲ್ಲ.

ಯುಗಯುಗಗಳಿಂದೆ ಇನಶಶಿಗಳು ನಿಚ್ಚ
ನಡೆಯುತಲಿವೆ; ಗಿರಿತರುಗಳು ಕದಲದಿವೆ ;
ಸೃಷ್ಟಿಯೈಸಿರಿಯನು ಸವಿಯುತಿದೆ ಜಗಹೃದಯ ;
ಇರುತಿರೆ ಸೃಷ್ಟಿಮಾತೆ ಅಭಯ ಹಸ್ತ ನೀಡಿ,
ಜೀವಿಸುವುದೊಂದೇ ಗುರಿ ಜೀವಾತ್ಮನಿಗೆ ;
‘ ಇರು ’ವೆ ಗುರಿಮುಟ್ಟುವನಕ ‘ ಅರಿ ’ವಾಸೆಯಲಿ !

ಚಿಟ್ಟೆ

ಗಿಡದಿಂ ಗಿಡಕೆ ಪೂವಿಂ ಪೂವಿಗೆ
ಪುಷ್ಪಕರಂಡದಿ ಮಧುವನೆ ಹೀರೆ,
ಹಳದಿಯು ಕಪ್ಪಿನ ಕಂದಿನ
ಕೆಂಬೊಟ್ಟಿನ ಬಿಳಿ ಒಡಲಿನ
ಚಿಟ್ಟೆಗಳೆಲ್ಲ ಮೆರೆದಿವೆ
ಸುಗ್ಗಿಯು ಮೋದದ ಹಿಗ್ಗಿನಲಿ.
ಹಾರುತಲಾಡಿ ನಲಿದುವು
ಕಣ್ಗಳಿಗಾನಂದವ ನೀಡಿ!
ತೇಲುತಲೋಡಿ ದಣಿದುವು
ಮನಕೆ ಮುದವನೆ ಸೂಸಿ!
ಎಳೆ ನೇಸರೇರುತಿರೆ ಬಾಂದಳದಿ
ಶುಕ ಪಿಕಗಳುಲಿದುವು
ಮೃದು ಮಧುರ ಕಂಠಗಳಲಿ!

ಚಿಟ್ಟೆ

ಮಧುಲೋಭದಿ ಅಲೆಯುವ
ಚಿಟ್ಟೆಗಳು ಮುದ ತಾಳಿವೆ ಅದಕೇಳಿ !
ಗಿಡಗಿಡದಲಿ ಅರಳಿದ
ವಿಧವಿಧ ವರ್ಣದ ಹೂಗಳು
ಚಿಟ್ಟೆಯು ಚೆಲುವಿಗೆ
ತನುಮನ ಸೋತು ತಲೆದೂಗುತಿವೆ !
ಬಳಿಯಲಿ ನಿಂದು
ಜಗವನೆ ಮರೆತು
ದೃಷ್ಟಿಯು ಕಕ್ಷೆಯು ಸೊಬಗನು ಉಂಡು
ಮೈದುಂಬಿದ ವರಸತಿಗೆ
ಕಾವ್ಯಕಲೆಯು ಸುಮಯ ಸ್ಫೂರ್ತಿ !

‘ ಶತಮಾನಂ ಭವತಿ ’

ನೀಲ ಗಗನ ಜಲಧಿಯಲಿ
ಮಾಲೆ ಮುಗಿಲ ಪಂಕ್ತಿಯಲಿ
ಮೂಡಿ ಬರಲು ಶಶಿ ತಾರಾಳಿ

ಕಾಡೆ ಮನದಿ ಶೈಶವ ಕಾಳಿ
ವಿಮರ್ಶೆಯು ಮಾಡಿದ ನಿಂತು
ಬುದ್ಧಿಮಾನ್ ವಿಮರ್ಶಕ!
ಏನಿದೇನಿದು ಚಂದಿರನೆ?
ನಿನ್ನಲಿಹುದು ನೂರು ಕಲೆ!
ಒಮ್ಮೆ ಕ್ಷೀಣಿಪೆ, ಒಮ್ಮೆ ಜ್ವಲಿಪೆ!
ಒಮ್ಮೆ ದುಂಡಗೆ, ಒಮ್ಮೆ ಸೊಟ್ಟಗೆ!
ರೋಗವಿಹುದು ಸಾವಿರ ಪಟ್ಟು!
ಇನಿತು ಬುದ್ಧಿಯುೂ ಇಲ್ಲವು!
ಇನಿತು ಶ್ರದ್ಧೆಯುೂ ಇಲ್ಲವು!
ಕ್ರಮವು ಮೊದಲೇ ಇಲ್ಲವು
ಯಾವಾಗಲೋ ಬರುವೆ!
ಯಾವಾಗಲೋ ಹೋಗುವೆ!
ನಿನ್ನಯ ಜನುಮಕೆ ಸಿರಿಯೇ ಇಲ್ಲವು!
ನೋಣ್ ಬಾಳ್ಮೆಗೆ ಬೆಲೆಯೇ ಇಲ್ಲವು!

‘ ಶತಮಾನಂ ಭವತಿ ’
ಎಂದರೋ ಮಹಾನುಭಾವರು
ನಿಜ ಕಣಾ !
ನೀಂ ಬಾಳ್ಗೆ ಶತಮಾನಂ
ಕರ್ಣ ಪಲ್ಲವಗಳಿಂಗೆ
ಹಬ್ಬವಲ್ತೆ ನಿನ್ನ ವಿಮರ್ಶಂ ?
ವೇಣ್ ರಸಮುಲ್ತೇ ಮನೋದಧಿಗೆ ?
ಹರಕೆಗೈವೆ ನಿನ್ನ ಶುಭಮಕ್ಕೆ !
ಬಾಳ್ಗಂ ನೂರ್ಕಾಲ !
ನಿನ್ನ ಸಂತತಿ ಕಂಗೆಡುವನ್ನೆಗಂ !

ಮಂಗಳಂ